ಸಂಪುಟ 01 । ಸಂಚಿಕೆ 173 ಗುರುವಾರ 27 ಆಗಸ್ಟ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ವಿಶ್ವ ಸರೋವರ ದಿನ (World Lake Day):**
ಸರೋವರಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಜಾಗತಿಕ ದಿನವಾಗಿದೆ. ಕೈಗಾರಿಕಾ ಮಾಲಿನ್ಯ, ಪರಿಸರ ವ್ಯವಸ್ಥೆಯ ಹಾನಿ ಮತ್ತು ಹವಾಮಾನ ಬದಲಾವಣೆಯಿಂದ ಸರೋವರಗಳನ್ನು ರಕ್ಷಿಸುವ ಅಗತ್ಯವನ್ನು ಇದು ಒತ್ತಿಹೇಳುತ್ತದೆ.

**2)ಮೂರನೇ NtA ಅವಿಟ್ಟಂ (Third Onam ? Avittam):**
ಕೇರಳದಲ್ಲಿ ಪ್ರಮುಖವಾಗಿ ಆಚರಿಸಲಾಗುವ ಓಣಂ ಸುಗ್ಗಿ ಹಬ್ಬದ ಮುಂದುವರಿದ ದಿನವಾಗಿದೆ. ಈ ದಿನ ಸಮುದಾಯದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಓಣಂ ಹಬ್ಬದ ಸಮಾರೋಪ ಸಮಾರಂಭಗಳ ಸಿದ್ಧತೆಗಳು ನಡೆಯುತ್ತವೆ.

**3)ರಾಷ್ಟ್ರೀಯ 'ಜಸ್ಟ್ ಬಿಕಾಸ್' ದಿನ (National Just Because Day):**
ಯಾವುದೇ ವಿಶೇಷ ಕಾರಣವಿಲ್ಲದೆ ಒಳ್ಳೆಯ ಕೆಲಸಗಳನ್ನು ಮಾಡುವುದು, ಇತರರಿಗೆ ಸಂತೋಷ ನೀಡುವುದು, ಸ್ವತಃ ಸಂತೋಷಪಡುವುದು ಅಥವಾ ಹಠಾತ್ ಪ್ರೀತಿಯ ಮತ್ತು ದಯೆಯ ಕಾರ್ಯಗಳನ್ನು ಮಾಡುವುದನ್ನು ಪ್ರೋತ್ಸಾಹಿಸುವ ಹಗುರವಾದ ವಿಶೇಷ ದಿನವಾಗಿದೆ.

**4)ರಾಷ್ಟ್ರೀಯ ಪೀಚ್ ದಿನ (National Peach Day):**
ಬೇಸಿಗೆಯ ಕಾಲದಲ್ಲಿ ದೊರೆಯುವ ರುಚಿಕರವಾದ ಪೀಚ್ ಹಣ್ಣನ್ನು ಗೌರವಿಸಿ ಆಚರಿಸುವ ವಾರ್ಷಿಕ ದಿನವಾಗಿದೆ. ಪೀಚ್ ಬೆಳೆಗಾರರು ಮತ್ತು ಕೃಷಿ ಕಾರ್ಮಿಕರ ಕೊಡುಗೆಯನ್ನು ಸಹ ಈ ದಿನ ಸ್ಮರಿಸಲಾಗುತ್ತದೆ.

## ಸುಭಾಷಿತ

ಗಾಳಿ ನೆರವಿರುವ ತನಕ ಪಟದ ಹಾರಾಟ; ಗದ್ದುಗೆ ಗಟ್ಟಿಯಿರುವ ತನಕ ಪುಢಾರಿ ಎಗರಾಟ.

–ಕೆ.ಎಸ್. ನಿಸಾರ್ ಅಹಮದ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಈದ್ ಮಿಲಾದ್ ಕಾರ್ಯಕ್ರಮದಲ್ಲಿ ಸಿದ್ದಲಿಂಗ ಶ್ರೀ ಸಲಹೆ
# ನಾವೆಲ್ಲರೂ ಒಂದು ಎಂಬ ಭಾವನೆ ಎಲ್ಲರಲ್ಲೂ ಇರಲಿ

❑ ನೈಜ್ಯ ದೆಸೆ ನ್ಯೂಸ್



**ತಾಳಿಕೋಟಿ: ಒಂದು ದಿನ ನಮಗೆಲ್ಲರಿಗೂ ಈ ಜಗತ್ತನ್ನು ಬಿಟ್ಟು ಹೋಗಬೇಕಾಗಿದೆ. ಭೂಮಿಯ ಮೇಲೆ ಬದುಕಿರುವಷ್ಟು ದಿನ ಮನುಷ್ಯರಾಗಿ ಮಾನವೀಯತೆಯನ್ನು ಬೆಳೆಸಿಕೊಂಡು,ಪರಸ್ಪರ ಪ್ರೀತಿ ಮತ್ತು ವಿಶ್ವಾಸದಿಂದ ಬದುಕಲು ಪ್ರಯತ್ನಿಸಿ ಎಂದು ಸ್ಥಳೀಯ ಶ್ರೀ ಖಾಸ್ಗತೇಶ್ವರ ಮಠದ ಪರಮ ಪೂಜ್ಯ ಸಿದ್ದಲಿಂಗ ದೇವರು ಹೇಳಿದರು.**

ಬುಧವಾರ ಪಟ್ಟಣದ ಆಶ್ರಯ ಬಡಾವಣೆಯಲ್ಲಿ "ಈದ್ ಮಿಲಾದ್" ಪ್ರಯುಕ್ತ ಆಶ್ರಯ ಕಾಲೋನಿ ಯಂಗ್ ಕಮಿಟಿ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಸಂಘಟಿತ ಜೀವನ ನಡೆಸಿ, ಬದುಕುವ ಹಕ್ಕು ಎಲ್ಲರಿಗೂ ಸಮಾನವಾಗಿದೆ. ಆದರೆ ಯಾರಿಗೂ ನೋವಾಗದಂತೆ ಬದುಕಿ. ಪ್ರವಾದಿಗಳು ಮಹಾತ್ಮರು ದಾರ್ಶನಿಕರು ಸಂತ ಶರಣರು ಕೊಟ್ಟುಹೋದ ಬದುಕಿನ ಆದರ್ಶಗಳನ್ನು ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಎಂದರು. ಕರವೇ ಜಿಲ್ಲಾ ಉಪಾಧ್ಯಕ್ಷ ಜೈ ಭೀಮ ಮುತ್ತಗಿ ಮಾತನಾಡಿ ಪ್ರವಾದಿ ಮೊಹಮ್ಮದರು ಮಾನವ ಸಮಾಜಕ್ಕೆ ಬಹಳಷ್ಟು ಕೊಡುಗೆಯನ್ನು ನೀಡಿದ್ದಾರೆ. ಸಮಾಜದಲ್ಲಿರುವ ದುರ್ಬಲರು, ನಿರ್ಗತಿಕರು ಹಾಗೂ ತುಳಿತಕ್ಕೆ ಒಳಗಾದ ಜನರನ್ನು ಮೇಲುತ್ತುವ ಕೆಲಸವನ್ನು ಅವರು ಮಾಡಿದರು ಇದನ್ನೇ ಅವರು ನಿಜವಾದ ಧರ್ಮ ಕಾರ್ಯವೆಂದು ಹೇಳಿದರು. ಪರಸ್ಪರ ದ್ವೇಷ ಅಸೂಯೆ ಹಾಗೂ ಹಗೆತನವನ್ನು ಅವರು ವಿರೋಧಿಸಿದರು.

ಪ್ರವಾದಿತ್ವದ ಒಂದು ಸಂಕ್ಷಿಪ್ತ ಅವಧಿಯಲ್ಲಿ ಅವರು ಸಮಾಜದಲ್ಲಿ ಮಹಾನ್ ಕ್ರಾಂತಿಯನ್ನು ತಂದರು, ಅವರ ಜನ್ಮದಿನವನ್ನು ಆಚರಿಸುವ ಈ ಸಂದರ್ಭದಲ್ಲಿ ನಾವೆಲ್ಲರೂ ಅವರು ಕೊಟ್ಟ ಹೋದ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಕೆಲಸವನ್ನು ಮಾಡಬೇಕಾಗಿದೆ ಎಂದರು. ಇದೇ ಸಂದರ್ಭದಲ್ಲಿ ಪೂಜ್ಯ ಸಿದ್ದಲಿಂಗ ದೇವರು ಸಿಹಿ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ.ಕಟ್ಟಿಮನಿ, ಪಿ ಎಸ ಐ ಜ್ಯೋತಿ ಕೋತ್, ದಲಿತ ಮುಖಂಡ ಮುತ್ತಪ್ಪ ಚಮಲಾಪೂರ, ಮುಸ್ಲಿಂ ಸಮಾಜದ ಯುವ ಮುಖಂಡ ನಿರಂಜನಶಾ ಮಕಾನದಾರ, ಮಾರುತಿ ಸಂಘದ ಅಧ್ಯಕ್ಷ ತೋಟಪ್ಪ ಏವೂರ, ಆಶ್ರಯ ಕಾಲೋನಿ ಯಂಗ್ ಕಮಿಟಿ ಅಧ್ಯಕ್ಷ ರಾಜು ಚಿತ್ತರಗಿ, ಉಪಾಧ್ಯಕ್ಷ ಖಾಜಾಪಟೇಲ ಪಟೇಲ, ಎಸ್ ಡಿ ಎಂ ಸಿ ಅಧ್ಯಕ್ಷ ಬುಡ್ಡಾ ಯಕೀನ, ದಾವಲಸಾಬ ಡೋಣಿ, ಲಕ್ಷ್ಮಿಕಾಂತ ಬಡಿಗೇರ, ಇಮಾಮಸಾಬ ಕಾಳಗಿ, ಲಕ್ಷ್ಮಣ ಏವೂರ, ಲಾಲಸಾಬ ಅಂಬಳನೂರ, ಆಶ್ರಯ ಕಾಲೋನಿ ಯಂಗ್ ಕಮಿಟಿ ಪದಾಧಿಕಾರಿಗಳು ಹಾಗೂ ಬಡಾವಣೆಯ ನಿವಾಸಿಗಳು ಇದ್ದರು.

## ಹಗ್ಗದಾಟದಲ್ಲಿ ವಿದ್ಯಾರ್ಥಿನಿಯರಿಗೆ ವಿಶೇಷ ತರಬೇತಿ

❑ ನೈಜ್ಯ ದೆಸೆ ನ್ಯೂಸ್




**ಕುಷ್ಟಗಿ: ವಿದ್ಯಾರ್ಥಿನಿಯರ ಸರ್ವತೋಮುಖ ಅಭಿವೃದ್ಧಿಯ ಉದ್ದೇಶದಿಂದ ಇಂಡಿಯಾ ವುಮೆನ್ಸ್ ಕ್ಲಬ್ (IWC) ವತಿಯಿಂದ ಶ್ರೀ ಅನ್ನದಾನೇಶ್ವರ ಕಾಲೇಜಿನ ವಿದ್ಯಾರ್ಥಿನಿಯರಿಗೆ ಹಗ್ಗದಾಟ (Skipping) ಕ್ರೀಡೆಯಲ್ಲಿ ವಿಶೇಷ ತರಬೇತಿ ನೀಡಲಾಯಿತು.**

ಅಂತರಾಷ್ಟ್ರೀಯ ಮಟ್ಟದ ಜಪಾನ್ ಸ್ಪರ್ಧೆಯಲ್ಲಿ ಭಾಗವಹಿಸಿ ಹಗ್ಗದಾಟ ವಿಭಾಗದಲ್ಲಿ ವಿಶಿಷ್ಟ ನೈಪುಣ್ಯ ಪ್ರದರ್ಶಿಸಿ ಬಹುಮಾನ ಪಡೆದಿರುವ ಶ್ರೀ ಮಂಜುನಾಥ್ ಚೌಡ್ಕಿ ಅವರು ವಿದ್ಯಾರ್ಥಿನಿಯರಿಗೆ ತರಬೇತಿ ನೀಡಿದರು. ಅವರ ಕ್ರೀಡಾ ಸಾಧನೆಯನ್ನು ಗುರುತಿಸಿ ಖಘಅ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಖಘಅ ಅಧ್ಯಕ್ಷೆ ಗೌರಮ್ಮ ಕುಡತನಿ, ಕಾರ್ಯದರ್ಶಿ ಶ್ರೀದೇವಿ ಮಸ್ಕಿಮಠ, ನಿಕಟಪೂರ್ವ ಅಧ್ಯಕ್ಷೆ ಗಿರಿಜಾ ಮಾಲಿ ಪಾಟೀಲ, ಖಜಾಂಚಿ ಪ್ರಭಾ ಬಂಗಾರಶೆಟ್ಟರ್, ISO ವಂದನಾ ಗೋಗಿ, ಎಡಿಟರ್ ಶಾರದ ಶೆಟ್ಟರ್, ಸದಸ್ಯರಾದ ಡಾ. ವೇದಾ ಪಾಟೀಲ, ಡಾ. ಕುಮುದಾ ಪಲ್ಲೆದ, ಬಸವರಾಜೇಶ್ವರಿ ಪಾಟೀಲ, ಸುವರ್ಣ ಬಳೂಟಗಿ, ಅಡಿವೆಮ್ಮ ಹಿರೇಮಠ ಹಾಗೂ ಅಡಿವೆಮ್ಮ ಕೊನಸಾಗರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಗುಮಗೇರಾದಲ್ಲಿ ಸಂಭ್ರಮದ ಈದ್ ಮಿಲಾದ್ ಆಚರಣೆ

❑ ನೈಜ್ಯ ದೆಸೆ ನ್ಯೂಸ್



**ಕುಷ್ಟಗಿ: ತಾಲೂಕಿನ ಗುಮಗೇರಾ ಗ್ರಾಮದಲ್ಲಿ ಮುಸ್ಲಿಂ ಸಮಾಜದ ವತಿಯಿಂದ ಈದ್ ಮಿಲಾದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನದ ಅಂಗವಾಗಿ ಗ್ರಾಮದಲ್ಲಿ ಸಿಹಿ ಹಂಚಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹಬ್ಬದ ಸಂಭ್ರಮವನ್ನು ಆಚರಿಸಲಾಯಿತು.**

ಕಾರ್ಯಕ್ರಮದಲ್ಲಿ ಗ್ರಾಮದ ಅಲ್ಲಾಸಾಬ ಭಾವಿಕಟ್ಟಿ, ಅಲ್ಲಾ ಸಾಬ್ ಕುದುರಿ, ರಾಜಾಸಾಬ ಭಾವಿಕಟ್ಟಿ, ಮಹಿಬೂಬಸಾಬ ಮುಲ್ಲಾ, ಟಿಪ್ಪು ಸುಲ್ತಾನ್ ಭಾವಿಕಟ್ಟಿ, ರಹಿಮಾನಸಾಬ ಮುಲ್ಲಾ, ಮಾಬುಸಾಬ ಕುದುರಿ, ಟಿಪ್ಪು ಸುಲ್ತಾನ್ ಕುದುರಿ, ಷರೀಫ್ ಸಾಬ ಭಾವಿಕಟ್ಟಿ, ಷರೀಫಸಾಬ್ ಟೈಲರ್, ರಾಜಾಸಾಬ ಭಾವಿಕಟ್ಟಿ, ರಾಜಾಸಾಬ ಕುಷ್ಟಗಿ ಸೇರಿದಂತೆ ಸಮಾಜದ ಮುಖಂಡರು ಹಾಗೂ ಮಕ್ಕಳು ಭಾಗವಹಿಸಿದ್ದರು. ಗ್ರಾಮದಲ್ಲಿ ಹಬ್ಬದ ವಾತಾವರಣ ಮನೆಮಾಡಿದ್ದು, ಮುಸ್ಲಿಂ ಸಮಾಜದವರು ಪರಸ್ಪರ ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶದೊಂದಿಗೆ ಈದ್ ಮಿಲಾದ್ ಆಚರಿಸಿದರು.

## ಈದ್ ಮಿಲಾದ್ ಪ್ರಯುಕ್ತ ವೃದ್ಧಾಶ್ರಮದಲ್ಲಿ ಸೌಹಾರ್ದಯುತ ಅನ್ನದಾಸೋಹ ಸೇವೆ

❑ ನೈಜ್ಯ ದೆಸೆ ನ್ಯೂಸ್



**ಬಳ್ಳಾರಿ / ಕಂಪ್ಲಿ : ಪವಿತ್ರ ಈದ್ ಮಿಲಾದ್ ಹಬ್ಬದ ಅಂಗವಾಗಿ ಪಟ್ಟಣದ ಕಂಪ್ಲಿ ಹಾರ್ಡ್ ವೇರ್ ವತಿಯಿಂದ ಕಂಪ್ಲಿ – ಗಂಗಾವತಿ ರಸ್ತೆಯಲ್ಲಿರುವ ನವಜೀವನ ವೃದ್ಧಾಶ್ರಮದಲ್ಲಿ ಆಶ್ರಯ ಪಡೆದಿರುವ ಹಿರಿಯ ಜೀವಗಳಿಗೆ ಅನ್ನದಾಸೋಹ (ಉಚಿತ ಅನ್ನದಾನ) ಸೇವೆಯನ್ನು ಅತ್ಯಂತ ಶ್ರದ್ಧೆ ಮತ್ತು ಸೌಹಾರ್ದತೆಯಿಂದ ಹಮ್ಮಿಕೊಳ್ಳಲಾಗಿತ್ತು.**

ಪ್ರವಾದಿ ಮೊಹಮ್ಮದರ ಜನ್ಮದಿನೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಈ ವಿಶೇಷ ಕಾರ್ಯಕ್ರಮದಲ್ಲಿ ಆಶ್ರಮದ ಎಲ್ಲಾ ಹಿರಿಯರಿಗೆ ಪೌಷ್ಟಿಕ ಹಾಗೂ ಮೃದುವಾದ ಹಬ್ಬದ ವಿಶೇಷ ಭೋಜನವನ್ನು ಸ್ವತಃ ಮಾಲೀಕರಾದ ಎಸ್. ಕೆ. ಅಜ್ಜುರುದ್ದಿನ್ ಹಾಗೂ ಎಸ್. ಕೆ. ಇಂತಿಯಾಜ್ ಊಟವನ್ನು ಬಡಿಸಿ ಸತ್ಕರಿಸಿದರು. ಕೇವಲ ಆಹಾರ ನೀಡುವುದಷ್ಟೇ ಅಲ್ಲದೆ, ಹಿರಿಯರೊಂದಿಗೆ ಸಾಂತ್ವನದ ನುಡಿಗಳನ್ನಾಡಿ, ಅವರ ಆರೋಗ್ಯ ವಿಚಾರಿಸಿ ಸ್ವಲ್ಪ ಸಮಯ ಕಳೆದದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್. ಕೆ. ಇಂತಿಯಾಜ್, "ಹಬ್ಬ ಎಂದರೆ ಕೇವಲ ಸಂಭ್ರಮಿಸುವುದಷ್ಟೇ ಅಲ್ಲ, ಸಮಾಜದಲ್ಲಿರುವ ನಿರಾಶ್ರಿತರು ಮತ್ತು ಹಿರಿಯರಿಗೆ ಪ್ರೀತಿ ಹಾಗೂ ಆಸರೆ ನೀಡುವುದೇ ನಿಜವಾದ ಹಬ್ಬದ ಪ್ರವಾದಿ ಮೊಹಮ್ಮದ್ ರವರ ಸಂದೇಶವಾಗಿದೆ. ಹಿರಿಯರ ಮುಖದಲ್ಲಿ ಮೂಡಿದ ನಗು ನಮಗೆ ತೃಪ್ತಿ ತಂದಿದೆ" ಎಂದು ತಿಳಿಸಿದರು. ಆಶ್ರಮದ ವ್ಯವಸ್ಥಾಪಕರು ಹಾಗೂ ಹಿರಿಯ ನಾಗರಿಕರು ಇವರ ಈ ನಿಸ್ವಾರ್ಥ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿ, ಹರಸಿದರು. ಕಾರ್ಯಕ್ರಮದಲ್ಲಿ ಬಡಿಗೇರ್ ಜಿಲಾನಸಾಬ್, ಆಶ್ರಮದ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

## ಮುಧೋಳ ಕವಿ–ಕಾವ್ಯ ಸಮ್ಮೇಳನಕ್ಕೆ ಹಿರಿಯ ನ್ಯಾಯವಾದಿ ಪ್ರಕಾಶ ವಸ್ತ್ರದ್ ಸರ್ವಾಧ್ಯಕ್ಷ

❑ ನೈಜ್ಯ ದೆಸೆ ನ್ಯೂಸ್



**ಮುಧೋಳ: ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಸೆಪ್ಟೆಂಬರ್ 20ರಂದು ನಡೆಯಲಿರುವ ಮುಧೋಳ ಕವಿ?ಕಾವ್ಯ ಸಮ್ಮೇಳನ?2026ರ ಸರ್ವಾಧ್ಯಕ್ಷರಾಗಿ ಹಿರಿಯ ನ್ಯಾಯವಾದಿ ಹಾಗೂ ಅಂಕಣಕಾರ ಪ್ರಕಾಶ ವಸ್ತ್ರದ್ ಅವರನ್ನು ಆಯ್ಕೆ ಮಾಡಲಾಗಿದೆ.**

ಕಾವ್ಯಶ್ರೀ ಚಾರಿಟೆಬಲ್ ಟ್ರಸ್ಟ್, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪೈಗು ಹಳಕಟ್ಟಿ ಪ್ರತಿಷ್ಠಾನದ ಸಹಯೋಗದಲ್ಲಿ ನಗರದ ಕಸಾಪ ಭವನದಲ್ಲಿ ಸಮ್ಮೇಳನವನ್ನು ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಕವಿ?ಕಾವ್ಯ ಕಾರ್ಯಕ್ರಮದ ಜೊತೆಗೆ ಕೃತಿ ಬಿಡುಗಡೆ, ಕವಿಗೋಷ್ಠಿ, ವಿಚಾರಗೋಷ್ಠಿ ಸೇರಿದಂತೆ ವಿವಿಧ ಸಾಹಿತ್ಯಿಕ ಕಾರ್ಯಕ್ರಮಗಳು ಜರುಗಲಿವೆ. ಇದೇ ಸಂದರ್ಭದಲ್ಲಿ ಸಾಹಿತ್ಯ, ಶಿಕ್ಷಣ, ಸಮಾಜಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುವುದು.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ನ್ಯಾಯವಾದಿ ಹಾಗೂ ಅಂಕಣಕಾರ ಪ್ರಕಾಶ ವಸ್ತ್ರದ್ ಅವರ ನಿವಾಸಕ್ಕೆ ತೆರಳಿದ ಆಯೋಜಕರು, ಅವರ ಸಮ್ಮುಖದಲ್ಲಿ ಸನ್ಮಾನಿಸಿ ಗೌರವಪೂರ್ವಕವಾಗಿ ಸಮ್ಮೇಳನಕ್ಕೆ ಆಹ್ವಾನಿಸಿದರು. ಈ ಸಂದರ್ಭದಲ್ಲಿ ಕಾವ್ಯಶ್ರೀ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಡಾ. ಶಿವಣ್ಣ ಜಿ., ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿದ್ದಣ್ಣ ಬಾಡಿಗಿ, ಪೈಗು ಹಳಕಟ್ಟಿ ಪ್ರತಿಷ್ಠಾನದ ಅಧ್ಯಕ್ಷ ಅಶೋಕ್, ಪತ್ರಕರ್ತ ವಿಶ್ವನಾಥ ಮುನವಳ್ಳಿ, ನ್ಯಾಯವಾದಿ ಸುಹಾಸ್ ವಸ್ತ್ರದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೊಹಮ್ಮದ್ ಪೈಗಂಬರ್(ಸ ವ) ರವರ 1501 ಜನ್ಮದಿನೋತ್ಸವ ಸಂಭ್ರಮದಿಂದ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಯಲಬುರ್ಗಾ: ಶಾಂತಿ, ಸಹೋದರತೆ ಹಾಗೂ ಮಾನವೀಯತೆಯ ಸಂದೇಶ ಸಾರಿದ ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ಅವರ 1501ನೇ ಜನ್ಮ ದಿನಾಚರಣೆಯನ್ನು ಯಲಬುರ್ಗಾ ನಗರದಲ್ಲಿ ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು. ಆಗಸ್ಟ್ 25ರ ಮಂಗಳವಾರ ರಾತ್ರಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಈದ್ ಮೀಲಾದ್ ಆಚರಣೆಗೆ ಚಾಲನೆ ನೀಡಲಾಯಿತು.**

ಬಳಿಕ ಜಾಮಿಯಾ ಮಸೀದಿಯಲ್ಲಿ ಇಡೀ ರಾತ್ರಿ ಪ್ರವಾದಿಯವರ ಜೀವನ, ಆದರ್ಶಗಳು ಹಾಗೂ ಮಾನವೀಯ ಸಂದೇಶಗಳ ಕುರಿತು ಪ್ರವಚನ ನಡೆಯಿತು. ನಾತೆ ಶರೀಫ್‌ಗಳ ಮೂಲಕ ಪ್ರವಾದಿಯವರ ಗುಣಗಾನ ಮಾಡಲಾಯಿತು. ಬೆಳಗಿನ ಜಾವ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಜನ್ಮ ದಿನಾಚರಣೆಯ ಪ್ರಮುಖ ಕಾರ್ಯಕ್ರಮಗಳು ಆರಂಭಗೊಂಡವು. ನಂತರ ಜಾಮಿಯಾ ಮಸೀದಿಯಿಂದ ಭವ್ಯ ಮೆರವಣಿಗೆ ಆರಂಭವಾಯಿತು. ಸಾವಿರಾರು ಜನರು ಭಾಗವಹಿಸಿದ್ದ ಮೆರವಣಿಗೆಯಲ್ಲಿ ಪವಿತ್ರ ಮೆಕ್ಕಾ ಮತ್ತು ಮದೀನಾ ಕುರಿತ ಸ್ಥಬ್ಧಚಿತ್ರಗಳನ್ನು ಅಲಂಕರಿಸಿ ಭಕ್ತಿಯಿಂದ ಸಾಗಿಸಲಾಯಿತು.

ನೂರಾರು ಮಕ್ಕಳು ವಿವಿಧ ವೇಷಭೂಷಣಗಳಲ್ಲಿ ಭಾಗವಹಿಸಿ ಪ್ರವಾದಿಯವರ ಶಾಂತಿ, ಪ್ರೀತಿ, ಸಹೋದರತೆ ಹಾಗೂ ಮಾನವೀಯತೆಯ ಸಂದೇಶಗಳನ್ನು ಸಾರಿದರು. ಈ ಸಂದರ್ಭದಲ್ಲಿ ಸುಮಾರು 150 ಕೆ.ಜಿ. ತೂಕದ ಕೇಕ್ ತಯಾರಿಸಿ ಸಾರ್ವಜನಿಕರಿಗೆ ಹಂಚಲಾಯಿತು. ಮೆರವಣಿಗೆಯುದ್ದಕ್ಕೂ ವಿವಿಧ ಬಗೆಯ ಸಿಹಿ ತಿಂಡಿಗಳನ್ನು ವಿತರಿಸುವ ಮೂಲಕ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಜಾಮಿಯಾ ಮಸೀದಿಯಿಂದ ಹೊರಟ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬಾಬಾ ಅಷರಫ್ ಅಲಿ ದರ್ಗಾ ತಲುಪಿತು. ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಮೆರವಣಿಗೆ ಮುಂದುವರಿದು ಚೆನ್ನಮ್ಮ ವೃತ್ತ, ಕನಕದಾಸ ವೃತ್ತ ಹಾಗೂ ಟಿಪ್ಪು ಸುಲ್ತಾನ್ ವೃತ್ತ ತಲುಪಿತು.

ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ನಂತರ ಮೆರವಣಿಗೆ ಮರಳಿ ಜಾಮಿಯಾ ಮಸೀದಿಗೆ ಆಗಮಿಸಿತು. ಮಸೀದಿಯಲ್ಲಿ ಸಾರ್ವಜನಿಕರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಮೆರವಣಿಗೆಯಲ್ಲಿ ಪಾಲ್ಗೊಂಡ ಜನರು ಪ್ರಸಾದ ಸ್ವೀಕರಿಸಿ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು. ಮೆರವಣಿಗೆಯಲ್ಲಿ ಜಾಮಿಯಾ ಮಸೀದಿ ಕಮಿಟಿ, ಬಾಬಾ ಅಷರಫ್ ಅಲಿ ದರ್ಗಾ ಕಮಿಟಿ ಸದಸ್ಯರು ಹಾಗೂ ಯಲಬುರ್ಗಾ ಮುಸ್ಲಿಂ ಸಮಾಜದ ಮುಖಂಡರಾದ ಬಾಬುಸಾಬ್ ಕುಂದಗೋಳ, ಅಕ್ತರ್‌ಸಾಬ್ ಖಾಜಿ, ಮಹಿಮೂದಮಿಯಾ ಖಾಜಿ, ಎಂ.ಎಫ್. ನದಾಫ್, ಆಯುಬ್‌ಸಾಬ್ ಕೊಪ್ಪಳ, ಕಾಶಿಮಅಲಿ ಮಾನ್ವಿ, ಮಹಿಬೂಬಸಾಬ್ ಇಟಗಿ, ಹಾಜಿಮಲಂಗ ಬಾಬಾ ಮಾನ್ವಿ, ಮುರ್ತುಜಾಸಾಬ್ ಕೊಪ್ಪಳ, ಮೈಬೂಬ್‌ಸಾಬ್ ಕನಕಗಿರಿ, ಭಾಷಾಸಾಬ್ ಕನಕಗಿರಿ, ಗೌಸುಸಾಬ್ ಕನಕಗಿರಿ, ಸಾಧಿಕ್ ಮಕಾಂದಾರ್, ಮಹಿಬೂಬಸಾಬ್ ಮಕಾನದಾರ್, ಫಾಶಸಾಬ್ ಹುರಕಡ್ಲಿ, ಶರೀಫ್ ಕೋತ್ವಾಲ್, ರಿಯಾಜ್ ನಾಲಬಂದ, ಮಹಮ್ಮದ್ ರಫೀಕ್ ಕೊಪ್ಪಳ, ಶಾಮಿದ್ ಆನೆಗುಂದಿ, ಮಹಿಬೂಬ್‌ಸಾಬ್ ಕೊಪ್ಪಳ, ಬಾಬಾ ಮನಿಯಾರ್, ಜಂದಿಸಾಬ್ ಮನಿಯಾರ್, ಹುಸೇನ್ ಖಾನ್ ಗಡಾದ, ಅಜಮೀರ್ ಹಿರೇಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಈದ್ ಮೀಲಾದ್ ಆಚರಣೆಯು ನಗರದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶವನ್ನು ಸಾರುವ ಮೂಲಕ ಗಮನ ಸೆಳೆಯಿತು.

## ಸಾಹಿತ್ಯ ಸಿಂಚನ

### ಜ್ಞಾನದ ಬೆಳಕು

ಜ್ಞಾನದ ಬೆಳಕು ಜೀವನದ ದಾರಿ,
ಅದು ತೋರಿಸುವ ಯಶಸ್ಸಿನ ಸಿರಿ.
ಅಜ್ಞಾನದ ಕತ್ತಲೆ ದೂರವಾಗುವುದು,
ಕಲಿಕೆಯ ಬೆಳಕು ಮನದಲ್ಲಿ ಮೂಡುವುದು.

ಪುಸ್ತಕಗಳು ಜ್ಞಾನದ ಸಾಗರ,
ಓದಿದ ಮನಸ್ಸು ಆಗುವುದು ಸಾಗರದ ಹರಿವು.
ಗುರುವಿನ ಮಾತು ದೀಪದಂತೆ,
ಬದುಕಿನ ಹಾದಿ ಬೆಳಗಿಸುವಂತೆ.

ಕಷ್ಟಗಳು ಬಂದರೂ ಹೆದರಬೇಡ,
ಜ್ಞಾನದೊಂದಿಗೆ ಮುಂದೆ ಸಾಗಿಬಿಡು.
ಪ್ರತಿ ದಿನವೂ ಹೊಸದನ್ನು ಕಲಿಯೋಣ,
ನಮ್ಮ ಕನಸುಗಳನ್ನು ನನಸಾಗಿಸೋಣ.

ಜ್ಞಾನವೇ ನಿಜವಾದ ಸಂಪತ್ತು,
ಅದು ನೀಡುವುದು ಬದುಕಿಗೆ ಮಹತ್ವ.
ಹಂಚಿದಷ್ಟು ಹೆಚ್ಚುವ ಅಮೂಲ್ಯ ಧನ,
ಅದೇ ಜ್ಞಾನವೆಂಬ ಪವಿತ್ರ ಗುಣ.

ಜ್ಞಾನದ ದೀಪವನ್ನು ಸದಾ ಹಚ್ಚೋಣ,
ಕತ್ತಲೆಯ ಬದುಕನ್ನು ಬೆಳಗಿಸೋಣ.
ಕಲಿತು ಬೆಳೆಯೋಣ ಕೈ ಜೋಡಿಸಿ,
ಸುಂದರ ಲೋಕವನ್ನು ಕಟ್ಟೋಣ ಒಗ್ಗೂಡಿ

## ಭಜನೆಯ ಮೂಲಕ ಸೌಹಾರ್ದ ಸಾರುತ್ತಿರುವ ವೀರಭದ್ರೇಶ್ವರ ಭಜನಾ ಮಂಡಳಿ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಚಳಗೇರಿ ಗ್ರಾಮದಲ್ಲಿ ವೀರಭದ್ರೇಶ್ವರ ಭಜನಾ ಮಂಡಳಿಯ ವತಿಯಿಂದ ವಿವಿಧ ದೇವಸ್ಥಾನಗಳಲ್ಲಿ ನಿತ್ಯ ಭಜನಾ ಕಾರ್ಯಕ್ರಮಗಳು ನಡೆಯುತ್ತಿದ್ದು, ಭಕ್ತಿ, ಸಂಸ್ಕೃತಿ ಹಾಗೂ ಸೌಹಾರ್ದತೆಯ ಸಂದೇಶ ಸಾರಲಾಗುತ್ತಿದೆ.**

'ನಮ್ಮ ಗ್ರಾಮದಲ್ಲಿ ಸರ್ವಧರ್ಮದವರೂ ಸೌಹಾರ್ದದಿಂದ ಬದುಕುತ್ತಿದ್ದೇವೆ. ಭಜನೆ, ಜಾತ್ರೆ ಸೇ-ರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಭಾಗವಹಿಸುತ್ತೇವೆ' ಎಂದು ಭಜನಾ ಮಂಡಳಿ ಸದಸ್ಯರು ತಿಳಿಸಿದ್ದಾರೆ. ಸುಮಾರು 15ರಿಂದ 20 ಜನರನ್ನೊಳಗೊಂಡ



ಭಜನಾ ತಂಡವು ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಭಜನಾ ಕಾರ್ಯಕ್ರಮಗಳನ್ನು ನಡೆಸುತ್ತದೆ. ತಂಡದ ಸದಸ್ಯರು ರಾಮ, ಸೀತೆ, ಲಕ್ಷ್ಮಣ, ಆಂಜನೇಯ ಸೇರಿದಂತೆ ವಿವಿಧ ದೇವರುಗಳ ಭಾವಚಿತ್ರಗಳನ್ನು ಕೈಯಲ್ಲಿ ಹಿಡಿದು ಸಾಗುತ್ತಾರೆ. ಮತ್ತೊಬ್ಬರು ಗರುಡಗಂಬವನ್ನು ಹೊತ್ತುಕೊಂಡು ಸಾಗುತ್ತಾರೆ. ಹಾರ್ಮೋನಿಯಂ, ತಬಲ, ತಾಳ ಸೇರಿದಂತೆ ವಿವಿಧ ವಾದ್ಯಗಳೊಂದಿಗೆ ಕಲಾವಿದರು ದೇವರ ನಾಮಗಳನ್ನು ಹಾಡುತ್ತಾ ಭಕ್ತಿಭಾವ ಮೂಡಿಸುತ್ತಾರೆ.

ಭಜನಾ ತಂಡವು ಗ್ರಾಮದ ಪ್ರಮುಖ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ಪ್ರಮುಖ ಸ್ಥಳಗಳಲ್ಲಿ ಪ್ರದಕ್ಷಿಣೆ ಹಾಕುತ್ತದೆ. ಬಳಿಕ ಮನೆಮನೆಗೆ ತೆರಳಿ ಸುಮಾರು ಅರ್ಧಗಂಟೆ ಕಾಲ ದೇವರ ಸ್ತುತಿ ಹಾಗೂ ಭಕ್ತಿಗೀತೆಗಳನ್ನು ಹಾಡುತ್ತದೆ. ಭಕ್ತರು ಭಜನಾ ಪೂಜೆಗಾಗಿ ಪ್ರಸಾದವನ್ನು ಸಿದ್ಧಪಡಿಸಿ ತಂಡದ ಸದಸ್ಯರನ್ನು ಭಕ್ತಿಭಾವದಿಂದ ಬರಮಾಡಿಕೊಳ್ಳುತ್ತಾರೆ. ಭಜನೆಯ ಮೂಲಕ ಧಾರ್ಮಿಕ ಭಾವನೆಗಳೊಂದಿಗೆ ಸಾಮಾಜಿ-ಕ ಸೌಹಾರ್ದತೆಯನ್ನೂ ಬೆಳೆಸುತ್ತಿರುವ ವೀರಭದ್ರೇಶ್ವರ ಭಜನಾ ಮಂಡಳಿಯ ಕಾರ್ಯಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ

## ಕಾರುಣ್ಯಾಶ್ರಮದಲ್ಲಿ ಹವಾ ಮಲ್ಲಿನಾಥ ಮಹಾರಾಜರ ಜನ್ಮದಿನ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜೈ ಭಾರತ ಮಾತಾ ಸೇವಾ ಸಮಿತಿ (ರಿ)ನವ ದೆಹಲಿಯ ರಾಜ್ಯಾಧ್ಯಕ್ಷರಾದ ಮತ್ತು ಇಡೀ ದೇಶದಲ್ಲಿ ಅಪಾರ ಭಕ್ತ ಬಳಗವನ್ನು ಹೊಂದಿರುವ ಪರಮಪೂಜ್ಯ ಸದ್ಗುರು ಶ್ರೀ ಹವಾ ಮಲ್ಲಿನಾಥ ಮಹಾರಾಜ ಮಹಾಸ್ವಾಮಿಗಳು ನಿರಗುಡಿ 59ನೇ ಜನ್ಮದಿನ ಸಮಾರಂಭ ಕಾರ್ಯಕ್ರಮ ಅವರ ಅಪ್ಪಟ ಭಕ್ತಾರಾದ ಬಸವರಾಜ ಬಡಿಗೇರ ಅವರ ನೇತೃತ್ವದಲ್ಲಿ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಈ ಸಮಯದಲ್ಲಿ ಪರಮಪೂಜ್ಯ ಸದ್ಗುರು ಶ್ರೀ ಹವಾ ಮಲ್ಲಿನಾಥ ಮಹಾರಾಜ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಆಶ್ರಯದಾದರುಗಳು ವಿಶೇಷ ಪೂಜೆ ಹಾಗೂ ನಮನಗಳನ್ನು ಸಲ್ಲಿಸಿ ಶ್ರೀಗಳಿಗೆ ಜನ್ಮದಿನದ ಶುಭಾಶಯಗಳು ಕೋರಿದರು. ಈ ಸಮಯದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಪರಮಪೂಜ್ಯರು ಸದ್ಗುರುಗಳಾದ ನಮ್ಮ ಮಾರ್ಗದರ್ಶಕರಾದ ಶ್ರೀ ಹವಾ ಮಲ್ಲಿನಾಥ ಮಹಾರಾಜರು ಅಪಾರ ಕುಲ ಕೋಟಿ ಭಕ್ತರನ್ನು ಹೊಂದಿರುವವರು ಅಂ-ಧ-ಅನಾಥರ ಬಾಳಿಗೆ ಬೆಳಕಾಗಿ ನೊಂದವರ ನಾಡಿಮಿಡಿತವಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ನಡೆದಾಡುವ ದೇವರಾಗಿದ್ದಾರೆ.

ಇಂತಹ ನಮ್ಮ ನಡೆದಾಡುವ ದೇವರ ಜನ್ಮದಿನವನ್ನು ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಕೂಡ ನಮ್ಮ ಸಿಂಧನೂರು ಅಪ್ಪಟ ಭಕ್ತಾರಾದ ಬಸವರಾಜ ಬಡಿಗೇರ ಹಲವಾರು ವಿವಿಧ ಸಮಾಜಪರ ಜನಪರ ಕಾರ್ಯಗಳನ್ನು ಮಾಡುವುದರ ಮೂಲಕ ಅವರ ಜನ್ಮದಿನವನ್ನು ಆಚರಿಸಿ ಅವರ ಪ್ರೀತಿಗೆ ಪಾತ್ರರಾಗಿದ್ದಾರೆ. ನಮ್ಮ ಪರಮ ಪೂಜ್ಯರ ಆಶೀರ್ವಾದ ಸದಾ ಕಾಲ ಕಾರುಣ್ಯ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ಎಲ್ಲ ದೇವರ ಮಕ್ಕಳ ಮೇಲೆ ಮತ್ತು ಪದಾಧಿಕಾ-ರಿಗಳ ಮೇಲೆ ಹಾಗೂ ಆಶ್ರಮದ ಸಿಬ್ಬಂದಿಗಳ ಮೇಲಿರಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ



ಅವರ ಜನ್ಮದಿನವನ್ನು ನೆರವೇರಿಸಲಾಗಿದೆ. ನಮ್ಮ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬದಿಂದ ಮತ್ತು ಕರುನಾಡಿನ ಕಾರುಣ್ಯ ಆಶ್ರಮದ ದಾನಿಗಳಿಂದ ಪರಮಪೂಜ್ಯ ಸದ್ಗುರು ಶ್ರೀ ಹವಾ ಮಲ್ಲಿನಾಥ ಮಹಾರಾಜ ನಿರಗುಡಿ ಅಪ್ಪಾಜಿ ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರುವ ಮೂಲಕ ಹಾರೈಸಲಾಗಿದೆ ಎಂದು ಪೂಜನೀಯ ಭಾವನೆಯಿಂದ ಶ್ರೀಗಳಿಗೆ ಜನ್ಮದಿನದ ಶುಭಾಶಯಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಬಸವ ಸ್ವಾಮಿ. ಶರಣು ಸ್ವಾಮಿ. ಹಾಗೂ ಎಲ್ಲಾ ಆಶ್ರಯದಾತರುಗಳು ಭಾಗವಹಿಸಿ ಶೀಗಳ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಶ್ರೀಗಳಿಗೆ ಪ್ರಾರ್ಥನೆಯ ಮೂಲಕ ಜನ್ಮದಿನದ ಶುಭಾಶಯಗಳನ್ನು ಕೋರಿದರು.

## ವೈಭವ ಕುಲಕರ್ಣಿ ಸಂಗೀತಕ್ಕೆ ಮಾರುಹೋದ ಜನರು

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ; ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವ

ಕುಷ್ಟಗಿ: ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಗಮನಾರ್ಹವಾಗಿ ಬೆಳೆಯುತ್ತಿರುವ ಯುವ ಗಾಯಕ ಶ್ರೀ ವೈಭವ ಕುಲಕರ್ಣಿ ಪುಲ್ದಿನ್ನಿ ಅವರನ್ನು ಸೌರಭ ಸಂಸ್ಕೃತಿಕ ಕಲಾ ಬಳಗ, ಹಿರೇಮನ್ನಾಪುರ ವತಿಯಿಂದ ಕುಷ್ಟಗಿಯಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ವೈಭವ ಕುಲಕರ್ಣಿ ಅವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಗಾಯನದ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಅವರ ಸುಮಧುರ ಗಾಯನಕ್ಕೆ ಇಡೀ ಕಾರ್ಯಕ್ರಮದ ಸಭಾಂಗಣವೇ ಚಪ್ಪಾಳೆಗಳ ಸದ್ದಿನಿಂದ ಮೊಳಗಿತು. ಗಾಯನದ ವಿವಿಧ ಪ್ರಸ್ತುತಿಗಳು ಪ್ರೇಕ್ಷಕರನ್ನು ಸಂಗೀತದ ಲೋಕದಲ್ಲಿ ತೇಲುವಂತೆ ಮಾಡಿದ್ದು, ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದವು. ಯುವ ಪ್ರತಿಭೆಯ ಸಂಗೀತಕ್ಕೆ ನೆರೆದಿದ್ದವರು ಮನಸೋತು ಮೆಚ್ಚುಗೆ ವ್ಯಕ್ತಪಡಿಸಿದರು. ವೈಭವ ಕುಲಕರ್ಣಿ ಅವರ ಸಂಗೀತ ಪ್ರತಿಭೆಯನ್ನು ಗುರುತಿಸಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಕಲಾ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಿದಂತಾಗಿದೆ ಎಂದು ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು ಅಭಿಪ್ರಾಯಪಟ್ಟರು. ಸೌರಭ ಸಂಸ್ಕೃತಿಕ ಕಲಾ ಬಳಗದ ವತಿಯಿಂದ ಪ್ರತಿಭಾವಂತ ಕಲಾವಿದರನ್ನು ಗುರುತಿಸಿ ಗೌರವಿಸುವ ಮೂಲಕ ಯುವ ಕಲಾವಿದರಿಗೆ ವೇದಿಕೆ ಕಲ್ಪಿಸುತ್ತಿರುವ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

## ಸಂಭ್ರಮದ ಈದ್ ಮಿಲಾದ್ ಆಚರಣೆ : ಮಕ್ಕ, ಮದೀನಾ ಸ್ತಬ್ಧಚಿತ್ರ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಇಸ್ಲಾಂ ಧರ್ಮದ ಸ್ಥಾಪಕ ಮಹ್ಮದ್ ಪೈಗಂಬರ್ ಅವರು ಜನಿಸಿದ ನೆನಪಿಗಾಗಿ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ, ಸಂಭ್ರಮದೊಂದಿಗೆ ಪಟ್ಟಣದಲ್ಲಿ ಬುಧವಾರ ಆಚರಿಸಿದರು.**

ಮುಸ್ಲಿಂ ಬಾಂಧವರು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ಟ್ರಾಕ್ಟರ್‌ನಲ್ಲಿ ಮಕ್ಕಾ-ಮದೀನಾ ಭಾವಚಿತ್ರದ ಭವ್ಯ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ನಡೆಸಿದರು. ಮೆರವಣಿಗೆಯಲ್ಲಿ ಯುವಕರು ನೃತ್ಯ, ಧ್ವಜ ಹಿಡಿದು ಸಂಭ್ರಮಿಸಿದರು. ಕಂಪ್ಲಿ-ಕೋಟೆಯಿಂದ ಆರಂಭಗೊಂಡ ಮೆರವಣಿಗೆ ಗಂಡುಗಲಿಕುಮಾರ ರಾಮನ ಕೋಟೆ, ಹಳೇ ಪೊಲೀಸ್ ಠಾಣೆ, ನಡುವಲ ಮಸೀದಿ, ಸಂತೆ ಮಾರುಕಟ್ಟೆ, ಸರ್ಕಾರಿ ಆಸ್ಪತ್ರೆ, ಮಹಾತ್ಮ ಗಾಂಧಿ ವೃತ್ತ, ಅಂಬೇಡ್ಕರ್ ಸರ್ಕಲ್, ಗಂಗಾನಗರ, ಜೋಗಿ ಕಾಲುವೆ ಮೂಲಕ ಹಜರತ್ ಬಡೇ ಸಾಹೇಬ್




ದರ್ಗಾದಲ್ಲಿ ಸಮಾವೇಶಗೊಂಡಿತು.

ಭವ್ಯ ಮೆರವಣಿಗೆಗೆ ಮುಸ್ಲಿಂ ಧರ್ಮಗುರು ಸೈಯದ್ ಷಾ ಅಬುಲ್ ಹಸನ್ ಖಾದ್ರಿ ಉರುಫ್ ಅಜಂ ಪಾಷ ಸಾಹೇನ್ ಸಜ್ಜಾದೇ ನಶೀನ್ ದಿವಾನಾ ಖಾನಾ ಕಂಪ್ಲಿ ಇವರು ದಿವ್ಯ ಸಾನಿಧ್ಯದೊಂದಿಗೆ ಚಾಲನೆ ನೀಡಿ ಮಾತನಾಡಿ, ಮಹ್ಮದ್ ಪೈಗಂಬರ್ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು, ಉತ್ತಮ ಬದುಕಿಗೆ ಸಾಕ್ಷಿಯಾಗಬೇಕು. ದಾನ, ಧರ್ಮದ ಮೂಲಕ ಬಡವರ ಸಂಕಷ್ಟಗಳಿಗೆ ದಾರಿದೀಪವಾಗಬೇಕು ಎಂದರು. ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮಗುರುಗಳಾದ ಸೈಯದ್ ಷಾ ಅಬುಲ್ ತುರಾಬ್ ಖಾದ್ರಿ, ಸೈಯದ್ ಷಾ ಚಾಂದ್ ಪಾಷಾ ಸಾಹೇಬ್, ಡಾ.ನೂರ್ ಸಾಹೇಬ್, ಈದ್ ಮಿಲಾದ್ ಕಮಿಟಿ ಅಧ್ಯಕ್ಷ ಯು.ಜಹೀರುದ್ದೀನ್, ಉಪಾಧ್ಯಕ್ಷ ಎಂ.ನಾಸೀರ್‌ದ್ದೀನ್, ಪದಾಧಿಕಾ-ರಿಗಳಾದ ನೂರ್, ರಾಜಾ, ಅಂಜುಮನ್-ಎ-ಖಿದ್ಮತೆ ಇಸ್ಲಾಂ ಕಮಿಟಿ ಅಧ್ಯಕ್ಷ ಅಬ್ದುಲ್ ಕರೀಮ್(ಲಡ್ಡು), ಈದ್ಗಾ ಕಮಿಟಿ ಅಧ್ಯಕ್ಷ ಎಂ.ಇಸ್ಮಾಯಿಲ್, ಸಮಾಜದ ಮುಖಂಡರಾದ ಮೆಹಮೂದ್, ವಾಹೀದ್, ಜಾಫರ್, ಎಲ್ಲಾ ಮೌಲ್ವಿಗಳು, ಮಸೀದಿಗಳ ಮುತುವಲ್ಲಿಗಳು, ಹಾಫಿಸಾಬ್‌ಗಳು, ಯುವಕರು, ಮಕ್ಕಳು ಸೇರಿದಂತೆ ಸರ್ವ ಸಮಾಜದವರು ಪಾಲ್ಗೊಂಡಿದ್ದರು. ತೋರಣಗಲ್ಲು ಡಿವೈ-ಎಸ್‌ಪಿ ಪ್ರಸಾದ್ ಗೋಖಲೆ, ಪಿಐ ಕೆ.ಬಿ.ವಾಸುಕುಮಾರ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಸ್ತ್ ಏರ್ಪಡಿಸಲಾಗಿತ್ತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಧಾರ್ಮಿಕ ಮೌಲ್ಯಗಳು ಅಗತ್ಯ : ವಾಮದೇವ ಮಹಾಂತ ಶಿವಾಚಾರ್ಯ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಮಠ ಮತ್ತು ಮಾನ್ಯಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳು ಸಮಾಜವನ್ನು ಸಂಘಟಿಸುವ ಕೇಂದ್ರಗಳಾಗಿದ್ದು, ಪರಸ್ಪರ ಪ್ರೀತಿ, ಸಹೋದರತೆ ಮತ್ತು ಸಹಕಾರದ ಮನೋಭಾವ ಬೆಳೆಸುತ್ತವೆ ಎಂದು ಹಂಪಿ ಸಾವಿರ ದೇವರ ಮಹಾಂತ ಮಠದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಹೇಳಿದರು.**

ತಾಲೂಕಿನ ಎಮ್ಮಿಗನೂರು ಗ್ರಾಮದ ಬುಧವಾರ ನಡೆದ ಶ್ರೀ ಮಲ್ಲಿಕಾರ್ಜುನ ದೇವರ ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆಯ ನಂತರದ ಧರ್ಮಸಭೆಯ ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ಮನುಷ್ಯನ ಜೀವನವು ಕೇವಲ ಲೌಕಿಕ ಸುಖ, ಭೋಗಗಳಿಗೆ ಸೀಮಿತವಾಗಿರದೆ, ಆದ-ಧ್ಯಾತ್ಮಿಕ ಚಿಂತನೆ, ಧರ್ಮ ಮತ್ತು ನೈತಿ-ಕತೆಯ ಹಾದಿಯಲ್ಲಿ ಸಾಗಿದಾಗ ಮಾತ್ರ ಸಾರ್ಥಕ ಪಡೆಯುತ್ತದೆ. ಪ್ರತಿದಿನ ಬೆಳಗ್ಗೆ ಮತ್ತು ವಿಶೇಷವಾಗಿ ಸಂಜೆಯ ವೇಳೆಯಲ್ಲಿ ಮನೆಯಲ್ಲಿ ಭಕ್ತಿ, ದೇವರ ಧ್ಯಾನ, ಭಜನೆ ಹಾಗೂ ಶ್ಲೋಕ ಪಠಣದ ವಾತಾವರಣ ನಿರ್ಮಿಸಬೇಕು. ಇದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಧಾರ್ಮಿಕ



ಮೌಲ್ಯಗಳು ಹಾಗೂ ಭಾರತೀಯ ಸಂಸ್ಕೃತಿಯ ಅರಿವು ಬೆಳೆಯುತ್ತದೆ.

ದೇವಾಲಯ ಹಾಗೂ ಮಠಗಳಲ್ಲಿ ನಡೆಯುವ ಸೇವೆಗಳು ದೇವರಿಗೆ ಸಲ್ಲಿಸುವ ಅತ್ಯುನ್ನತ ಸೇವೆಯಾಗಿದ್ದು, ಇಂತಹ ಪರಂಪರೆಯ ಸೇವೆಯನ್ನು ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸಬೇಕು ಎಂದರು. ನಂತರ ಅರಗಿನದೋಣಿ ಅಭಿನವ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ ಆಶೀರ್ವಚನ ನೀಡಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಮರೆಯಾಗುತ್ತಿರುವ ಆಧ್ಯಾತ್ಮಕ ಚಿಂತನೆಗಳನ್ನು ಪ್ರತಿಯೊಬ್ಬರ ಬದುಕಲ್ಲಿ ಬಿತ್ತಬೇಕಾಗಿದೆ. ಭಾರತ ದೇಶದಲ್ಲಿ ಸಾಕಷ್ಟು ಭಕ್ತರು ದೇವಾನು ದೇವತೆಗಳನ್ನು ಆರಾಧಿಸುತ್ತಿರುವುದರಿಂದ ನಾಡಿನಲ್ಲಿ ಮಳೆ, ಬೆಳೆ ಕಾಣುವಂತಾಗಿದೆ. ಮತ್ತು ಮನುಷ್ಯನಲ್ಲಿ ಉತ್ತಮ ಬದುಕಿಗೆ ನಾಂದಿಯಾಗಿದೆ ಎಂದರು.

ಪ್ರತಿಷ್ಠಾಪನೆ : ಗ್ರಾಮದಲ್ಲಿ ಬೆಳಗಿನ ಜಾವದಲ್ಲಿ ಹಂಪಿ ಸಾವಿರ ದೇವರ ಮಹಾಂತ ಮಠದ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಅವರ ದಿವ್ಯ ಸಾನಿಧ್ಯದಲ್ಲಿ ಆರಾಧ್ಯ ದೈವ ಶ್ರೀ ಮಲ್ಲಿಕಾರ್ಜುನ ನೂತನ ಮೂರ್ತಿ, ದೇವಾಲಯ, ಶ್ರೀ ವಿನಾಯಕ, ನಾಗದೇವತೆ, ಶಿವಲಿಂಗ, ನಂದೀಶ್ವರ ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಶುಭಗಳಿಗೆಯಲ್ಲಿ ಬುಧವಾರ ಶ್ರದ್ಧಾಭಕ್ತಿಯಿಂದ ನೆರವೇರಿತು. ಈ ಸಂದರ್ಭದಲ್ಲಿ ಗುಲ್ಬರ್ಗಾದ ಚಂದ್ರಶೇಖರ ಸ್ವಾಮೀಜಿ, ಹೆಚ್.ವೀರಾಪುರದ ಜಡೇಶತಾತ, ಮುಖಂಡರಾದ ಸದಾಶಿವಪ್ಪ, ಬಿ.ಪ್ರವೀಣ್‌ಕುಮಾರ, ಕೆ.ಬಿ.ವೇದಮೂರ್ತಿ, ಬಿ.ಮಹೇಶಗೌಡ, ಬಿ.ವಿ.ಗೌಡ, ಜಿ.ನಾಗರೆಡ್ಡಿ ಸೇರಿದಂತೆ ಸಕಲ ಸದ್ಭಕ್ತರು ಪಾಲ್ಗೊಂಡಿದ್ದರು.

## ಗಜ ಪಯಣಕ್ಕೆ ಅದ್ದೂರಿಯಾಗಿ ಮೈಸೂರುಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತಿಂದ್ರ ಸಿದ್ದರಾಮಯ್ಯ ಚಾಲನೆ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ಮೈಸೂರು ದಸರಾ 2026 ರ ಗಜ ಪಯಣಕ್ಕೆ ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಆನೆಗಳಿಗೆ ಪೂಜೆ ಸಲ್ಲಿಸಿ, ಫಲ ತಾಂಬೂಲ ನೀಡಿ ವೀರನಹೊಸಹಳ್ಳಿ ಬಳಿ ಚಾಲನೆ ನೀಡಿದರು.**

ಸಚಿವ ಡಾಕ್ಟರ್ ಎಸ್, ಯತೀಂದ್ರ ಸಿದ್ದರಾಮಯ್ಯನವರು ಇದೇ ಮೊದಲ ಬಾರಿಗೆ ಮೈಸೂರು ದಸರಾದಲ್ಲಿ ಪಾಲ್ಗೊಳ್ಳುವ ಆನೆಗಳಿಗೆ ಪೂಜೆಸಲ್ಲಿಸಿ ಸಂತಸ ವ್ಯಕ್ತಪಡಿಸಿದರು ಬಳಿಕ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯನವರು ಸುದ್ದಿಗಾರರೊಂದಿಗೆ ಮಾತನಾಡಿ ದರದಲ್ಲಿ ಕಳೆದ 25 ವರ್ಷಗಳಿಂದ ಪಾಲ್ಗೊಂಡು ಸೇವೆಯನ್ನು ನಿರ್ವಹಿಸಿದ ಅಭಿಮಾನಿವೆಗೆ ಸಂಪ್ರದಾಯಿಕವಾಗಿ ಬಿಳ್ಕೊಡಲಾಗಿದ್ದು ದಸದಲ್ಲಿ ಅಂಬಾರಿ ಹೊರವ ಆನೆಯನ್ನು ಮೈಸೂರಿನ ಅರಮನೆಯಲ್ಲಿ ತರಬೇತಿ ನೀಡುವ ಸಮಯದಲ್ಲಿ ಅದನ್ನು ಗುರುತು ಮಾಡುತ್ತಾರೆ ಎಂದು ಹೇಳಿದ ಅವರು ಈ ಬಾರಿಯ ಪ್ರಸನ್ನದಲ್ಲಿ ಕಂಬಳ ಕ್ರೀಡೆ ಇರುತ್ತದೆ ಅದನ್ನು ಮುಖ್ಯಮಂತ್ರಿಗಳಾದ ಡಿಕೆ ಶಿವಕುಮಾರ್ ಅವರು ತೀರ್ಮಾನಿಸಿದ್ದು



ಈ ಬಾರಿಯ ಮೈಸೂರು ದಸರದಲ್ಲಿ ಕಂಬಳ ಕ್ರೀಡೆ ಇರುತ್ತದೆ ಎಂದು ತಿಳಿಸಿದರು ದಸರದಲ್ಲಿ ಪಾಲ್ಗೊಳ್ಳುವ ಮೊದಲ ಹಂತದಲ್ಲಿ 9 ಆನೆ ಗಳಾದ ಮಹೇಂದ್ರ, ಶ್ರೀಕಂಠ, ಲಕ್ಷ್ಮೀ, ಏಕಲವ್ಯ, ಧನಂ-ಜಯ, ಗೋಪಿ, ಕಾವೇರಿ, ಪ್ರಶಾಂತ, ಶ್ರೀರಾಮ ಆನೆಗಳು ಮೈಸೂರು ದಸರಾಗೆ ಆಗಮಿಸಿದವು. ಕಳೆದ ಕೆಲವು ವರ್ಷಗಳಿಂದ ಅಂಬಾರಿ ಹೊತ್ತು, ಪ್ರಸ್ತುತ ನಿವೃತ್ತಿ ಆಗಿರುವ ಅಭಿಮನ್ಯುವಿಗೆ ಗೌರವಪೂರ್ವಕವಾಗಿ ಬೀಳ್ಕೊಡುಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಅರಣ್ಯ ವಸತಿ ವಿಹಾರಧಾಮಗಳ ಅಧ್ಯಕ್ಷರು ಹಾಗೂ ಹೆಚ್ ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅನಿಲ್ ಚಿಕ್ಕಮಾದು ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ ಡಿ ಹರೀಶ್ ಗೌಡ, ಕೆ ಆರ್ ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಿ ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಸಿ ಎನ್ ಮಂಜೇಗೌಡ, ಮಾಜಿ ಶಾಸಕ ಎಂ ಕೆ ಸೋಮಶೇಖರ್ ಗ್ಯಾರಂಟಿ ಯೋಜನಾ ಸಮಿತಿಯ ಅಧ್ಯಕ್ಷ ಡಾ. ಪುಷ್ಪ ಅಮರನಾಥ್ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಪ್ರದೇಶಿಕ ಆಯುಕ್ತರಾದ ನಿತೀಶ್ ಪಾಟೀಲ್, ದಕ್ಷಿಣ ವಲಯದ ಐ ಜಿ ಪಿ ಬೋರಲಿಂಗಯ್ಯ, ಜಿಲ್ಲಾಧಿಕಾರಿಗಳಾದ ಜಿ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾ-ರಿಗಳಾದ ಎಸ್ ಯುಕೇಶ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**KPSC ನೇಮಕಾತಿ 2026 ? 319 ಏಂಖ ಗ್ರೂಪ್ A ಮತ್ತು B ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ**

KPSC ನೇಮಕಾತಿ 2026: ಏಕಖಅಯು 2026–27ನೇ ಸಾಲಿನ 319 ಗ್ರೂಪ್–ಂ ಮತ್ತು : ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದೆ. ಕರ್ನಾಟಕ ಲೋಕಸೇವಾ ಆಯೋಗವು (KPSC) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 319 ಏಂಖ ಗ್ರೂಪ್–A ಮತ್ತು B ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಆಗಸ್ಟ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: kpsc.kar.nic.in

## ರಸ್ತೆ ಸುರಕ್ಷಾ ಸಪ್ತಾಹ: ವಿದ್ಯಾರ್ಥಿಗಳಿಂದ ಸಂಚಾರ ನಿಯಮಗಳ ಕುರಿತು ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು ಪೊಲೀಸ್ ಠಾಣೆ ಹಾಗೂ ಲಿಂಗಸುಗೂರು ಪಟ್ಟಣದ ಸುಧಾ ಮೂರ್ತಿ ಪದವಿ ಕಾಲೇಜಿನ ವಿದ್ಯಾರ್ಥಿಗಳ ಸಹಯೋಗದಲ್ಲಿ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮದ ಅಂಗವಾಗಿ ಪೊಲೀಸ್ ಸಿಬ್ಬಂದಿ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ನಗರದ ಪ್ರಮುಖ ರಸ್ತೆಗಳಲ್ಲಿ ತೆರಳಿ ವಾಹನ ಸವಾರರು ಮತ್ತು ಸಾರ್ವಜನಿಕರಿಗೆ ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸಿದರು. ಪ್ರತಿಯೊಬ್ಬರೂ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ತಮ್ಮ ಜೀವದ ಜೊತೆಗೆ ಇತರರ ಜೀವವನ್ನೂ ರಕ್ಷಿಸಬೇಕು ಎಂದು ತಿಳಿಸಲಾಯಿತು. ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು, ಕಾರಿನಲ್ಲಿ ಸೀಟ್ ಬೆಲ್ಟ್ ಬಳಸುವುದು, ವೇಗದ ಮಿತಿಯನ್ನು ಪಾಲಿಸುವುದು, ಸಂಚಾರ ಸಂಕೇತಗಳನ್ನು ಗೌರವಿಸುವುದು ಹಾಗೂ ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಸದೇ ಇರುವುದು ಸೇರಿದಂತೆ ಹಲವು ಪ್ರಮುಖ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಅದೇ ರೀತಿ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ಅತ್ಯಂತ ಅಪಾಯಕಾರಿ. ಇಂತಹ ಸಂದರ್ಭದಲ್ಲಿ ವಾಹನ ಚಲಾಯಿಸುವುದರಿಂದ ಚಾಲಕನಷ್ಟೇ ಅಲ್ಲದೆ, ರಸ್ತೆ ಬಳಸುವ ಇತರ ಅಮಾಯಕರು ಕೂಡ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುವುದರಿಂದ ಮದ್ಯಪಾನ ಮಾಡಿ ವಾಹನ ಚಲಾಯಿಸದಂತೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಯಿತು. ವಿದ್ಯಾರ್ಥಿಗಳು ಕೈಯಲ್ಲಿ ವಿವಿಧ ಜಾಗೃತಿ ಫಲಕಗಳನ್ನು ಹಿಡಿದು "ಸಂಚಾರ ನಿಯಮ ಪಾಲಿಸಿ ? ಜೀವ ಉಳಿಸಿ", "ಹೆಲ್ಮೆಟ್ ಧರಿಸಿ ಸುರಕ್ಷಿತವಾಗಿ ಮನೆ ತಲುಪಿ", "ವೇಗದ ಚಾಲನೆ ಬೇಡ ಜೀವ ಅಮೂಲ್ಯ" ಎಂಬ ಘೋಷಣೆಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಪಾದಚಾರಿಗಳು ರಸ್ತೆ ದಾಟುವಾಗ ಜಾಗರೂಕತೆ ವಹಿಸಬೇಕು, ಜೀಬ್ರಾ ಕ್ರಾಸಿಂಗ್ ಹಾಗೂ ಸೂಕ್ತ ಸ್ಥಳಗಳನ್ನು ಬಳಸಬೇಕು ಮತ್ತು ಮಕ್ಕಳ ಹಾಗೂ ಹಿರಿಯ ನಾಗರಿಕರ ಸುರಕ್ಷತೆಗೆ ವಿಶೇಷ ಗಮನ ನೀಡಬೇಕು ಎಂದು ತಿಳಿಸಲಾಯಿತು. ಈ ಸಂದರ್ಭದಲ್ಲಿ ಪೊಲೀಸರು ಮಾತನಾಡಿ, ರಸ್ತೆ ಸುರಕ್ಷತೆ ಕೇವಲ ಪೊಲೀಸ್ ಇಲಾಖೆಯ ಜವಾಬ್ದಾರಿಯಲ್ಲ; ಪ್ರತಿಯೊಬ್ಬ ವಾಹನ ಸವಾರ ಮತ್ತು ಸಾರ್ವಜನಿಕರ ಕರ್ತವ್ಯವೂ ಆಗಿದೆ. ಸಣ್ಣದೊಂದು ನಿರ್ಲಕ್ಷ್ಯವೂ ದೊಡ್ಡ ಅಪಘಾತಕ್ಕೆ ಕಾರಣವಾಗಬಹುದು. ಆದ್ದರಿಂದ ಪ್ರತಿಯೊಬ್ಬರೂ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಅಪಘಾತ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿ, ಸುಧಾ ಮೂರ್ತಿ ಪದವಿ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆಯ ಮಹತ್ವದ ಕುರಿತು ಅರಿವು ಮೂಡಿಸಿದರು.

## ಹೆಲ್ಮೆಟ್ ಜಾಗೃತಿ : ವಿದ್ಯಾರ್ಥಿಗಳಿಂದ ಸಾರ್ವಜನಿಕರಿಗೆ ಅರಿವು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಲಿಂಗಸಗೂರು ಪೊಲೀಸ್ ಠಾಣೆ ಹಾಗೂ ಸುಧಾ ಮೂರ್ತಿ ಪದವಿ ಕಾಲೇಜಿನ ವಿದ್ಯಾರ್ಥಿಗಳ ಸಹಯೋಗದಲ್ಲಿ ಹೆಲ್ಮೆಟ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**



ಬಸ್ ನಿಲ್ದಾಣ, ಬಸವಸಾಗರ ಕ್ರಾಸ್ ಹಾಗೂ ಕಾಳಾಪುರ ರಸ್ತೆ ಸೇರಿದಂತೆ ವಿವಿಧೆಡೆ ವಿದ್ಯಾರ್ಥಿಗಳು ಸಾರ್ವಜನಿಕ–ರಿಗೆ ಹೆಲ್ಮೆಟ್ ಧರಿಸುವ ಮಹತ್ವದ ಕುರಿತು ಅರಿವು ಮೂಡಿಸಿದರು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕು. ಹೆಲ್ಮೆಟ್ ಧರಿಸುವುದರಿಂದ ಅಪಘಾತ ಸಂದರ್ಭದಲ್ಲಿ ತಲೆಗೆ ಆಗುವ ಗಂಭೀರ ಗಾಯಗಳನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು. ಸಾರ್ವಜನಿಕರು ಸಂಚಾರ ನಿಯಮಗಳನ್ನು ಪಾಲಿಸುವುದರ ಜೊತೆಗೆ ಸುರಕ್ಷಿತ ಚಾಲನೆಗೆ ಆದ್ಯತೆ ನೀಡಬೇಕು ಎಂದು ಪೊಲೀಸರು ಹಾಗೂ ವಿದ್ಯಾರ್ಥಿಗಳು ಮನವಿ ಮಾಡಿದರು.

# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ಈದ್ ಮಿಲಾದ್ ಆಚರಣೆ

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದಲ್ಲಿ ಈದ್ ಮಿಲಾದ್ ಹಬ್ಬವನ್ನು ಜಾಲಹಳ್ಳಿ ಜಾಮಿಯಾ ಮಸೀದಿ ನೇತೃತ್ವದಲ್ಲಿ ಮುಸ್ಲಿಂ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು.**

ಈದ್ ಮಿಲಾದ್ ಅಂಗವಾಗಿ ಜಾಮಿಯಾ ಮಸೀದಿ ಆವರಣದಲ್ಲಿ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದರು. ಅಲ್ಲಿಂದ ಸ್ತಬ್ಧಚಿತ್ರ ಮೆರವಣಿಗೆಗೆ ಚಾಲನೆ ನೀಡಲಾಗಿದ್ದು, ಭಕ್ತಿ ಗೀತೆಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಯು ಟಿಪ್ಪು ಸುಲ್ತಾನ್ ವೃತ್ತ ತಲುಪಿದಾಗ ಮುಸ್ಲಿಂ ಮುಖಂಡರು ಟಿಪ್ಪು ಸುಲ್ತಾನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ನಂತರ ಅಂಬೇಡ್ಕರ್ ವೃತ್ತಕ್ಕೆ ತಲುಪಿದ ಮೆರವಣಿಗೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮುಖಂಡರು ಮಾಲಾರ್ಪಣೆ ಸಲ್ಲಿಸಿದರು. ಬಳಿಕ ವಾಲ್ಮೀಕಿ ವೃತ್ತಕ್ಕೆ ತೆರಳಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೂ ಮಾಲಾರ್ಪಣೆ ಮಾಡಲಾಯಿತು.

ನಂತರ ಮೆರವಣಿಗೆಯು ರಂಗನಾಥ ದೇವಸ್ಥಾನದ ರಸ್ತೆ ಮೂಲಕ ಸಾಗಿಬಂದು ಜಾಮಿಯಾ ಮಸೀದಿ ಆವರಣ ತಲುಪಿತು.



**ಈ ಸಂದರ್ಭದಲ್ಲಿ ಮಾತನಾಡಿದ ಜಾಮಿಯಾ ಮಸೀದಿಯ ಪೇಶ ಇಮಾಮ್ ಮೌಲಾನಾ ಮಮ್ತಾಜ್ ರಹಿ ಅವರು, ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ಅವರ ಜಯಂತಿಯ ಅಂಗವಾಗಿ ಈದ್ ಮಿಲಾದ್ ಆಚರಿಸಲಾಗುತ್ತಿದೆ. ಪ್ರವಾದಿಯವರು ಜಾತಿ–ಭೇದವಿಲ್ಲದೆ ಎಲ್ಲರೂ ಸಮಾನರು ಎಂಬ ಸಂದೇಶ ಸಾರಿದ್ದರು. ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಪ್ರತಿಯೊಬ್ಬರೂ ವಿದ್ಯಾಭ್ಯಾಸ ಕಲಿಯಬೇಕು ಎಂಬ ಉಪದೇಶ ನೀಡಿದ್ದರು. ಜಗತ್ತಿನ ಶಾಂತಿ, ಸಹೋದರತ್ವ ಮತ್ತು ಸಮಾನತೆಗಾಗಿ ಪ್ರವಾದಿಯವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.**

ಜಾಮಿಯಾ ಮಸೀದಿಯಲ್ಲಿ ಸಿಹಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದ್ದು, ಊರಿನ ಮುಸ್ಲಿಂ ಬಾಂಧವರು ಸೇರಿದಂತೆ ಸಾರ್ವಜನಿಕ–ರಿಗೆ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಮುಸ್ಲಿಂ ಮುಖಂಡರಾದ ಜನಾಬ್ ಹಾಜಿ ಖಾಜಾ ಹುಸೇನ್ ಸಾಬ್ ಆಗಬಾಯಿ, ಜನಾಬ್ ಹಾಜಿ ಮಲಿಕ್ ಅಹಮದ್ ಸಾಬ್ ಸರನೌಬತ್, ಜಾಮಿಯಾ ಮಸೀದಿ ಅಧ್ಯಕ್ಷ ಬಾಬಾ ಮೆಡಿಕಲ್, ಕಾರ್ಯದರ್ಶಿ ಹೈದೆರ್ ಸಾಬ್ ಮುಲ್ಲಾ, ಯೂಸುಫ್ ಸಾಬ್ ಚೋರಗಸ್ತಿ, ನಸಿರುದ್ದಿನ್ ಮುಲ್ಲಾ, ಜಾಮಿಯಾ ಮಸೀದಿ ಉಪಾಧ್ಯಕ್ಷ ರಾಜ ಮೊಹಮ್ಮದ್ ಕಲೆಗಾರ, ಮೊಯಿನುದ್ದಿನ್ ಜಕತಿ, ಪ್ರಾಥ–ಮಿಕ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಖುರ್ಷಿದ್ ಪಟೇಲ್, ಲಾಲ್ ಅಹಮದ್ ಟೈಲರ್, ಮಹಿಬೂಬ್ ಕಾರ್ಪೆಂಟರ್, ಯಾಸಿನ್ ಮುಲ್ಲಾ, ಹುಸೇನ್ ಸಾಬ್ ಸಂತ್ರಾಸ್, ಹುಸೇನ್ ನಾಸಿ, ಜೆಡಿಎಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮಕ್ತುಮ್, ಅಬ್ದುಲ್ ನಬಿಸಾಬ್ ಸುರ್ನೋಬತ್, ಇಮಾಮ್ ಸಾಬ್ ಉದ್ದಾರ್, ಜಾಕಿರ್ ಹುಸೇನ್ ಆರ್ತಿ, ಹೈದೆರ್ ಸಾಬ್ ಉದ್ದಾರ್, ಬುಡಾನ್ ಸಾಬ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು. ಗ್ರಾಮ ಪಂಚಾಯಿತಿ ಸದಸ್ಯರಾದ ಅಬ್ದುಲ್ ರಹಮಾನ್ ಖುರೇಶಿ, ಮಕ್ತುಮ್ ಪರಾಶಿ ಸೇರಿದಂತೆ ಊರಿನ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸೂಕ್ತ ಪೊಲೀಸ್ ಬಂದೋಬಸ್ತ್ ಈದ್ ಮಿಲಾದ್ ಮೆರವಣಿಗೆ ಹಿನ್ನೆಲೆಯಲ್ಲಿ ಜಾಲಹಳ್ಳಿ ಪಿಎಸ್‌ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಎಎಸ್‌ಐ ರಾಜಕುಮಾರ್, ಪೊಲೀಸ್ ಸಿಬ್ಬಂದಿಗಳಾದ ಉಮೇಶ್, ಆಂಜನೇಯ ಸೇರಿದಂತೆ ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

# ನಗರಲೆ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘದ25–26, ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ನೈಜ್ಯ ದೆಸೆ ನ್ಯೂಸ್

**ನಗರಲೆ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘದ25–26, ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ತಾಂಡದಪುರ ಆಗಸ್ಟ್ 26 ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ನಗರಲೆ ಗ್ರಾಮದ ಹಾಲು ಉತ್ಪಾದಕರ ಸಂಘದ.**

25 26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಸವಾಂಗಣದಲ್ಲಿ ನಡೆಯಿತು ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಎನ್ ಬಿ ವೀರೇಂದ್ರ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಸಂಘದ ಹಾಲು ಉತ್ಪಾದಕರು ಸಂಘಕ್ಕೆ ಉತ್ತಮ ಗುಣಮಟ್ಟದ ಹಾಲನ್ನು ಪೂರೈಸುವ ಮೂಲಕ ಸಂಘದ ಅಭಿವೃದ್ಧಿ ಜೊತೆಗೆ ತಾವು ಕೂಡ ಸಂಘಕ್ಕೆ ಹೆಚ್ಚು ಹಾಲು ಹಾಕುವ ಮೂಲಕ ತಾವು ಕೂಡ ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತದೆ ಆ ದಿಕ್ಕಿನಲ್ಲಿ ಸದಸ್ಯರು ಶ್ರಮಿಸಬೇಕು ಎಂದರು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಹಾಲು ವಿಸ್ತಾರಣಾಧಿಕಾರಿಗಳಾದ ಆರ್ ಶ್ರುತಿ ರವರು ಮಾತನಾಡಿ ಮೈಸೂರು ಜಿಲ್ಲಾ ಹಾಲು ಒಕ್ಕೂಟದಿಂದ ಹಾಗೂ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ತಿಳಿಸುವ ಮೂಲಕ ಹಾಲು ಉತ್ಪಾದಕರು ದೊರಕುವಂತ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಮಂಜುಳಾ ನಿರ್ದೇಶಕರಗಳಾದ ಎನ್ ಈ ಗುರುಸ್ವಾಮಿ ಎನ್‌ಎಂ ರಾಜಶೇಖರ್ ಎನ್ ಎಂ ರಾಜು ನಾಗೇಗೌಡ ಎನ್ ಎಂ ಮಹಾದೇವಸ್ವಾಮಿ ಪಾಪಣ್ಣ ಜಯಕುಮಾರ್ ಚೆನ್ನ ಗೌರಮ್ಮ ಸ್ವಾಮಿ ಎನ್ ಎಸ್ ನಾಗೇಂದ್ರ ಸ್ವಾಮಿ ಸಂಘದ ಮುಖ್ಯ ಕಾರ್ಯನಿರ್ವಾಳಾಧಿಕಾರಿ ಎನ್‌ಎಂ ರಾಜೇಂದ್ರ ಹಾಗೂ ಸಂಘದ ಎಲ್ಲಾ ಸದಸ್ಯರುಗಳು ಉತ್ಪದಕರು ಸಭೆಯಲ್ಲಿ ಭಾಗಿಯಾಗಿದ್ದರು




# ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್ ರಾಜ್ಯವ್ಯಾಪಿ ಅಭಿಯಾನದ ಅಂಗವಾಗಿ ಪೌರಕಾರ್ಮಿಕರಿಗೆ ಗೌರವ ಸನ್ಮಾನ ಕಾರ್ಯಕ್ರಮ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: "ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್ ರಾಜ್ಯವ್ಯಾಪಿ ಅಭಿಯಾನ 2026" ಆಗಸ್ಟ್ 26ರಿಂದ ಸೆಪ್ಟೆಂಬರ್ 6ರವರೆಗೆ ರಾಜ್ಯಾದ್ಯಂತ ನಡೆಯುತ್ತಿದ್ದು, ಇದರ ಅಂಗವಾಗಿ ಜಮಾಅತೆ ಇಸ್ಲಾಮಿ ಹಿಂದ್, ಸಿಂಧನೂರು ವತಿಯಿಂದ ನಗರದ ಪೌರಕಾರ್ಮಿಕರಿಗೆ ಗೌರವ ಸಲ್ಲಿಸುವ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಮಸೀದಿ ಹುದಾ ಕೆಳಭಾಗದಲ್ಲಿ ಆಯೋಜಿಸಲಾಗಿತ್ತು.**

ಪ್ರವಾದಿ ಮುಹಮ್ಮದ್ ಅವರ ಜೀವನ, ಆದರ್ಶಗಳು, ಬೋಧನೆಗಳು ಹಾಗೂ ಮಾನವೀಯ ಸಂದೇಶಗಳನ್ನು ಸಮಾಜದ ವಿವಿಧ ವರ್ಗಗಳಿಗೆ ತಲುಪಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ ಈ ಅಭಿಯಾನದ ಅಂಗವಾಗಿ, ಸಮಾಜದ ಸ್ವಚ್ಛತೆ ಮತ್ತು ಆರೋಗ್ಯಕ್ಕಾಗಿ ಪ್ರತಿದಿನವೂ ಶ್ರಮಿಸುತ್ತಿರುವ ಪೌರಕಾರ್ಮಿಕರನ್ನು ಗುರುತಿಸಿ ಗೌರವಿಸಲಾಯಿತು. ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವಲ್ಲಿ ಪೌರಕಾರ್ಮಿಕರು ವಹಿಸುತ್ತಿರುವ ಮಹತ್ವದ ಪಾತ್ರವನ್ನು ಗುರುತಿಸಿ, ಅವರ ಪರಿಶ್ರಮ, ಸೇವೆ ಮತ್ತು ತ್ಯಾಗಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜಮಾಅತೆ ಇಸ್ಲಾಮಿ ಹಿಂದ್, ಸಿಂಧನೂರು ಅಧ್ಯಕ್ಷರಾದ ಜನಾಬ್ ಹುಸೇನ್ ಸಾಬ್ ಅವರು ಕಾರ್ಯಕ್ರಮದ ಉದ್ದೇಶ ಹಾಗೂ ಪೌರಕಾರ್ಮಿಕರ ಮಹತ್ವ, ಅವರ ಪರಿಶ್ರಮ ಮತ್ತು ಸೇವೆಯ ಕುರಿತು ಅತ್ಯಂತ ಅರ್ಥಪೂರ್ಣವಾಗಿ ಮಾತನಾಡಿದರು. ನಗರದ ಸ್ವಚ್ಛತೆಗಾಗಿ ಪೌರಕಾರ್ಮಿಕರು ಪ್ರತಿದಿನವೂ ಮಾಡುತ್ತಿರುವ ಸೇವೆಯನ್ನು ಸಮಾಜ ಗುರುತಿಸಿ ಗೌರವಿಸಬೇಕು ಎಂದು ಅವರು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಿವೃತ್ತ ಶಿಕ್ಷಕರಾದ ಜನಾಬ್ ಹುಸೇನ್ ಬಾಷಾ ಸಾಬ್ ಅವರು ಪ್ರವಾದಿ ಮುಹಮ್ಮದ್ ? ಅವರ ಜೀವನ, ಆದರ್ಶಗಳು ಹಾಗೂ ಬೋಧನೆಗಳನ್ನು ಮುಂದಿಟ್ಟುಕೊಂಡು ಮಾತನಾಡಿದರು. ಮಾನವೀಯತೆ, ಪರಸ್ಪರ ಗೌರವ ಮತ್ತು ಸೇವಾ ಮನೋಭಾವವನ್ನು ಬೆಳೆಸುವುದು ಪ್ರವಾದಿ ಅವರ ಜೀವನದಿಂದ ನಮಗೆ ದೊರೆಯುವ ಪ್ರಮುಖ ಸಂದೇಶಗಳಾಗಿವೆ ಎಂದು ಅವರು ವಿವರಿಸಿದರು. ಇದೇ ಸಂದರ್ಭದಲ್ಲಿ ಪೌರಕಾರ್ಮಿಕರ ಸೇವೆ ಮತ್ತು ಪರಿಶ್ರಮವನ್ನು ವಿಶೇಷವಾಗಿ ಶ್ಲಾಘಿಸಿ, ಅವರ ಕಾರ್ಯವನ್ನು ಗೌರವಿಸುವ ಅಗತ್ಯವನ್ನು ಒತ್ತಿ ಹೇಳಿದರು.

ನಂತರ ಸೀರತ್ ಸ್ವಾಗತ ಸಮಿತಿಯ ಜವಾಬ್ದಾರರ ವತಿಯಿಂದ ಪೌರಕಾರ್ಮಿಕ–ರಿಗೆ ಶಾಲು ಹಾಗೂ ಹೂಗುಚ್ಛ ನೀಡಿ ಗೌರವ ಸನ್ಮಾನ ನೆರವೇರಿಸಲಾಯಿತು. ಪೌರಕಾರ್ಮಿಕರ ಪ್ರತಿದಿನದ ಪರಿಶ್ರಮಕ್ಕೆ ಈ ಸನ್ಮಾನವು ಒಂದು ಸಣ್ಣ ಗೌರವದ ಸಂಕೇತವಾಗಿದ್ದು, ಅವರ ಸೇವೆಯ ಬಗ್ಗೆ ಸಮಾಜದ ಕೃತಜ್ಞತೆಯನ್ನು ವ್ಯಕ್ತಪಡಿಸುವ ಪ್ರಯತ್ನವಾಗಿದೆ ಎಂದು ಆಯೋಜಕರು ತಿಳಿಸಿದರು.

ಈ ಸಂದರ್ಭದಲ್ಲಿ ಪೌರಕಾರ್ಮಿಕರ ಪರವಾಗಿ ಮಾತನಾಡಿದ ಮೌನೇಶ್ ಮೇಸ್ತ್ರಿ ಅವರು, ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಪೌರಕಾರ್ಮಿಕರನ್ನು ಗುರುತಿಸಿ ಗೌರವಿಸಿರುವುದು ಅತ್ಯಂತ ಸಂತೋಷದ ಹಾಗೂ ಮೆಚ್ಚುಗೆಯ ವಿಚಾರವಾಗಿದೆ ಎಂದು ಹೇಳಿದರು. ಇಂತಹ ಕಾರ್ಯಕ್ರಮಗಳು ಪೌರಕಾರ್ಮಿಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರ ಜೊತೆಗೆ ಸಮಾಜದಲ್ಲಿ ಪರಸ್ಪರ ಗೌರವ ಮತ್ತು ಮಾನವೀಯತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಪೌರಕಾರ್ಮಿಕರಿಗೆ ಜಮಾಅತೆ ಇಸ್ಲಾಮಿ ಹಿಂದ್, ಸಿಂಧನೂರು ವತಿಯಿಂದ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ಅಬುಲೇಸ್ ನಾಯಕ್ ಅವರು ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಸೀರತ್ ಅಭಿಯಾನ ಸ್ವಾಗತ ಸಮಿತಿಯ ಸದಸ್ಯರಾದ ವಲಿ ಸಾಬ್ ಮಿಟ್ಟಿಮಣಿ, ಸ್ವಾಗತ ಸಮಿತಿಯ ಸಹ ಸಂಚಾಲಕರಾದ ಜನಾಬ್ ಖಾಜಿ ಜಾವೀದ್ ಸಾಹೇಬ್, ನೂರ್ ಖಾನ್ ಸಾಹೇಬ್, ನಯೀಮ್ ಚೌಧರಿ, ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗದ ಅಧ್ಯಕ್ಷರಾದ ಸುಮಯ್ಯಾ ಬೇಗಂ, ಮಹಿಳಾ ವಿಭಾಗದ ಉಪಾಧ್ಯಕ್ಷರಾದ ಲುಬ್ನಾ ಬೆಳಗಾಮಿ, ಮೌಲಾನಾ ಮೆಹರಾಜ್ ಅಹ್ಮದ್ ಖಾದ್ರಿ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪೌರಕಾರ್ಮಿಕರ ಪರವಾಗಿ ಅಮರೇಶ್ ಮೇಸ್ತ್ರಿ, ಮೌನೇಶ್ ಮೇಸ್ತ್ರಿ, ಮ–ರಿಯಪ್ಪ ಮೇಸ್ತ್ರಿ ಹಾಗೂ ಯಮನಮ್ಮ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರವಾದಿ ಮುಹಮ್ಮದ್ ಅವರ ಜೀವನ ಮತ್ತು ಬೋಧನೆಗಳನ್ನು ಸಮಾಜದ ವಿವಿಧ ವರ್ಗಗಳಿಗೆ ತಲುಪಿಸುವುದರ ಜೊತೆಗೆ, ಸಮಾಜಕ್ಕೆ ಸೇವೆ ಸಲ್ಲಿಸುವ ಕಾರ್ಮಿಕರನ್ನು ಗೌರವಿಸುವ ಮಾನವೀಯ ಸಂದೇಶವನ್ನು ಸಾರಿದ ಈ ಕಾರ್ಯಕ್ರಮವು ಎಲ್ಲರ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ನಡೆಯಿತು.







# ಸಿಂಧನೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವೇಗ ನೀಡಲು ಸಿಎಂಗೆ ಬಸನಗೌಡ ಬಾದರ್ಲಿ ಮನವಿ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂ–ರಿನ ಕೃಷ್ಣ ನಿವಾಸದಲ್ಲಿ ನಡೆದ ವಿಧಾನ ಪರಿಷತ್ ಸದಸ್ಯರ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಹಾಗೂ ಸಿಂಧನೂರು ಕ್ಷೇತ್ರದ ಜನಪ್ರಿಯ ನಾಯಕ ಶ್ರೀ ಬಸನಗೌಡ ಬಾದರ್ಲಿ ಅವರು ಭಾಗವಹಿಸಿ, ಸಿಂಧನೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಪ್ರಮುಖ ವಿಷಯಗಳ ಕುರಿತು ಮುಖ್ಯಮಂತ್ರಿಗಳ ಗಮನ ಸೆಳೆದರು.**

ಸಭೆಯಲ್ಲಿ ರಾಜ್ಯದ ವಿವಿಧ ವಿಧಾನ ಪರಿಷತ್ ಸದಸ್ಯರ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ, ಬಾಕಿ ಉಳಿದಿರುವ ಕಾಮಗಾರಿಗಳಿಗೆ ವೇಗ ನೀಡುವುದು, ಜನ–ರಿಗೆ ಅಗತ್ಯವಿರುವ ಮೂಲಸೌಕರ್ಯಗಳ ಅಭಿವೃದ್ಧಿ ಹಾಗೂ ಸರ್ಕಾರದ ವಿವಿಧ ಜನಪರ ಯೋಜನೆಗಳನ್ನು ಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸುವ ಕು–



ರಿತು ಮಹತ್ವದ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಬಸನಗೌಡ ಬಾದರ್ಲಿ ಅವರು ಸಿಂಧನೂರು ಕ್ಷೇತ್ರದ ಜನರ ಆಶೋತ್ತರಗಳು ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಪ್ರಮುಖ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಕ್ಷೇತ್ರದಲ್ಲಿ ಕೈಗೊಳ್ಳಬೇಕಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡುವಂತೆ ಹಾಗೂ ಈಗಾಗಲೇ ಮಂಜೂರಾಗಿರುವ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಅಗತ್ಯ ವೇಗ ನೀಡುವಂತೆ ಮನವಿ ಮಾಡಿದರು.

ಸಿಂಧನೂರು ಕ್ಷೇತ್ರದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು, ಚರಂಡಿ, ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಅಗತ್ಯವಿದೆ. ಜನಸಾಮಾನ್ಯರಿಗೆ ಸರ್ಕಾರದ ಯೋಜನೆಗಳ ಪ್ರಯೋಜನಗಳು ಸಮರ್ಪಕವಾಗಿ ತಲುಪುವಂತೆ ಸಂಬಂಧಿಸಿದ ಇಲಾಖೆಗಳ ಮೂಲಕ ಪರಿಣಾಮಕಾರಿ ಕ್ರಮ ಕೈಗೊಳ್ಳುವಂತೆ ಅವರು ಸಭೆಯಲ್ಲಿ ಒತ್ತಾಯಿಸಿದರು.

ಅಭಿವೃದ್ಧಿಯ ವಿಚಾರದಲ್ಲಿ ಯಾವುದೇ ರಾಜಕೀಯ ಭೇದಭಾವವಿಲ್ಲದೆ ಕ್ಷೇತ್ರದ ಪ್ರತಿಯೊಂದು ಭಾಗಕ್ಕೂ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ತಮ್ಮ ಪ್ರಮುಖ ಗುರಿಯಾಗಿದೆ ಎಂದು ಬಸನಗೌಡ ಬಾದರ್ಲಿ ಅವರು ತಿಳಿಸಿದರು. ಸಿಂಧನೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದ ಸಹಕಾರ ಹಾಗೂ ಅಗತ್ಯ ಅನುದಾನ ದೊರೆಯುವಂತೆ ನಿರಂತರವಾಗಿ ಪ್ರಯತ್ನಿಸಲಾಗುವುದು ಎಂದು ಅವರು ಹೇಳಿದರು.

ಸಿಂಧನೂರು ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು, ಜನರ ಬೇಡಿಕೆಗಳನ್ನು ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸುವುದು ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡುವುದು ತಮ್ಮ ಆದ–್ಯತೆಯಾಗಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುವುದಾಗಿ ಅವರು ಭರವಸೆ ನೀಡಿದರು. "ಜನಸೇವೆಯೇ ಸಂಕಲ್ಪ, ಸಿಂಧನೂ–ರಿನ ಸಮಗ್ರ ಅಭಿವೃದ್ಧಿಯೇ ಧ್ಯೇಯ" ಎಂಬ ಆಶಯದೊಂದಿಗೆ ಶ್ರೀ ಬಸನಗೌಡ ಬಾದರ್ಲಿ ಅವರು ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಸಿಂಧನೂರು ಕ್ಷೇತ್ರದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳಿಗೆ ವೇಗ ದೊರೆಯುವ ನಿರೀಕ್ಷೆ ಮೂಡಿದೆ.

## ವಚನ ದರ್ಶನ

ಒಲ್ಲೆನೆಂಬುದು ವೈರಾಗ್ಯ ಒಲಿವೆನೆಂಬುದು ಕಾಯಗುಣ ಆವ ಪದಾರ್ಥವಾದಡೇನು ತನ್ನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ. ಕೂಡಲಸಂಗಮದೇವರನೊಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು

ಶರಣರ ಉಗಮವಾದ ಹನ್ನೊಂದನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ 12ನೇ ಶತಮಾನದ ಕಡೆಯವರೆಗೂ ಬಸವಣ್ಣನವರ– ಜನಸಾಮಾನರ ಆಂದೋಲನದ ಭಾಗವಾಗಿ ಬೆಳೆದು ಬಂತು. ಇದು ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಪ್ರಕಾರ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗಾತಿಯಾಯಿತು.ವಚನ ಎಂದರೆ 'ಪ್ರಮಾಣ', 'ಕೊಟ್ಟ ಮಾತು' ಎಂದರ್ಥ.

ವಿಶ್ವಗುರು ಭಕ್ತಿ ಭಂಡಾರಿ ಬಸವಣ್ಣನವರ ಅತ್ಯಂತ ಪ್ರಸಿದ್ಧ ಹಾಗೂ ಅರ್ಥಗರ್ಭಿತ ವಚನಗಳಲ್ಲೊಂದಾಗಿದೆ. ಈ ವಚನವು ಮನುಷ್ಯನ ಆಸೆ, ವೈರಾಗ್ಯ ಮತ್ತು ಭಕ್ತಿಯ ನಿಜವಾದ ಸ್ವರೂಪವನ್ನು ಸುಂದರವಾಗಿ ವಿವರಿಸುತ್ತದೆ.

ಒಲ್ಲೆನೆಂಬುದು ವೈರಾಗ್ಯ ಲೋಕದ ಭೋಗ–ಭಾಗ್ಯಗಳು ಬೇಡ, ಆಸೆಗಳೆಲ್ಲವನ್ನೂ ತ್ಯಜಿಸುತ್ತೇನೆ ಎಂದು ಬಾಯಲ್ಲಿ ಹೇಳಿಕೊಳ್ಳುವುದು ನಿಜವಾದ ವೈರಾಗ್ಯವಲ್ಲ. ಅದು ಕೇವಲ ಬಾಹ್ಯ ಪ್ರದರ್ಶನವಷ್ಟೇ.

ಒಲಿವೆನೆಂಬುದು ಕಾಯಗುಣ ಪ್ರಾಪಂಚಿಕ ವಸ್ತುಗಳ ಮೇಲೆ, ಸುಖಗಳ ಮೇಲೆ ಆಸೆ ಪಡುವುದು ಮನುಷ್ಯನ ದೇಹದ ಸಹಜ ಗುಣವಾಗಿದೆ (ಕಾಯಗುಣ).ಆವ ಪದಾರ್ಥವಾದಡೇನು ತಾನಿರ್ದೆಡೆಗೆ ಬಂದುದಲ್ಲದೆ: ನಮ್ಮ ಕರ್ಮ ಹಾಗೂ ಯೋಗ್ಯತೆಗೆ ತಕ್ಕಂತೆ ಯಾವುದೇ ವಸ್ತು ಅಥವಾ ಸೌಲಭ್ಯ ನಮ್ಮ ಬಳಿ ತಾನಾಗಿಯೇ ಬರುತ್ತದೆ. ಅದನ್ನು ಬಲವಂತವಾಗಿ ನಿರಾಕರಿಸುವ ಅಗತ್ಯವಿಲ್ಲ.

ಲಿಂಗಾರ್ಪಿತವಲ್ಲದುದ ಭೋಗಿಸದಿದ್ದಡೆ ನಮಗೆ ಸಿಕ್ಕ ಯಾವುದೇ ವಸ್ತುವನ್ನು ಮೊದಲು ದೇವರಿಗೆ ಲಿಂಗಕ್ಕೆ ಅರ್ಪಿಸಿ, ನಂತರ ಅದನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸಬೇಕು. ಅಹಂಕಾರದಿಂದ ಅಥವಾ ಕೇವಲ ಸ್ವಾರ್ಥದ ಆಸೆಯಿಂದ ಯಾವುದನ್ನೂ ಅನುಭವಿಸಬಾರದು.

ಯಾರು ಎಲ್ಲವನ್ನೂ ದೇವರಿಗೆ ಅರ್ಪಿಸಿ, ಅನಾಸಕ್ತಿಯಿಂದ ಜೀವನ ನಡೆಸುತ್ತಾರೋ ಅಂಥವರಿಗೆ ಕೂಡಲಸಂಗಮದೇವನು ಒಲಿಯುತ್ತಾನೆ ಎಂದು ಬಸವಣ್ಣನವರು ಈ ವಚನದಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಅಂದರೆ, ಸಂಸಾರವನ್ನು ಬಿಟ್ಟು ಓಡಿಹೋಗುವುದು ವೈರಾಗ್ಯವಲ್ಲ; ಸಂಸಾರದಲ್ಲಿದ್ದೂ ಭಗವಂತನಿಗೆ ಶರಣಾಗಿ ಬಾಳುವುದು ನಿಜವಾದ ವೈರಾಗ್ಯ ಎಂದು ಹೇಳಬಹುದು ಶರಣರ ವಚನಗಳು ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ಈದ್ ಮಿಲಾದ್ ಪ್ರಯುಕ್ತ ಮೆಕ್ಕಾ ಮದಿನಾ ಸ್ಥಬ್ದ ಚಿತ್ರ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

ಕವಿತಾಳ: ಇಂದು ಪವಿತ್ರ ಈದ್ ಮಿಲಾದ್ ಉನ್ ನಬಿ ಹಬ್ಬದ ಪ್ರಯುಕ್ತ ಮುಸ್ಲಿಂ ಭಾಂಧವರು ಮೆಕ್ಕಾ ಮದಿನಾ ಸ್ಥಬ್ದ ಚಿತ್ರವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದರು.



ನಿನ್ನೆ ರಾತ್ರಿ ಪಟ್ಟಣದ ಧಣಿಯವರ ಮನೆಯಿಂದ ಆಸರ್ ಖಾನದವರೆಗೆ ಗಂಧದ ಮೆರವಣಿಗೆ ಸೇರಿದಂತೆ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳು ಸೈಯದ್ ಅಬ್ದುಯಲ್ ರಸೂಲ್ ಖಾದ್ರಿ ಧಣಿಯವರ ನೇತೃತ್ವದಲ್ಲಿ ಜರುಗಿದವು, ಸಾವಿರಾರು ಜನ ಮುಸ್ಲಿಂ ಭಾಂದವರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

# ಮಹಾತ್ಮರ ಬದುಕಿನ ಆದರ್ಶಗಳನ್ನು ಪಾಲಿಸೋಣ: ಜಾಧವ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಈ ಜಗತ್ತಿಗೆ ಬಂದ ಎಲ್ಲ ಪ್ರವಾದಿಗಳು, ದಾರ್ಶನಿಕರು, ಸಂತ– ಶರಣರು ನಮಗೆ ಮನುಷ್ಯರಾಗಿ ಹೇಗೆ ಬದುಕಬೇಕೆಂಬುದನ್ನು ಕಲಿಸಿಕೊಟ್ಟಿದ್ದಾರೆ.ಆ ಮಹಾತ್ಮರು ನಮಗೆ ತೋ–ರಿಸಿದ ಮಾರ್ಗದಲ್ಲಿ ಒಂದಾಗಿ ಮುನ್ನಡೆಯುವ ಅಗತ್ಯವಿದೆ ಎಂದು ಸ್ಥಳೀಯ ರಸ್ತೆ ಸಾರಿಗೆ ಘಟಕ ವ್ಯವಸ್ಥಾಪಕ ಪಿ.ಕೆ.ಜಾಧವ ಹೇಳಿದರು.

ಬುಧವಾರ ಪಟ್ಟಣದ ರಸ್ತೆ ಸಾರಿಗೆ ಘಟಕದಲ್ಲಿ ಪ್ರವಾದಿ ಮೊಹಮ್ಮದರ ಜನ್ಮದಿನದ ಸ್ಮರಣಾರ್ಥವಾಗಿ ಹಮ್ಮಿಕೊಂಡ "ಈದ್ ಮಿಲಾದ್" ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾವೆಲ್ಲರೂ ಭಾರತೀಯರು ನಾವೆಲ್ಲರೂ ಒಂದು ಎಂಬ ಭಾವನೆ ಎಲ್ಲರಲ್ಲೂ ಬರಬೇಕಾಗಿದೆ ಯಾವ ಧರ್ಮವೂ ಹಿಂಸೆ ಮತ್ತು ದ್ವೇಷವನ್ನು ಭೋಧಿಸಿಲ್ಲ. ಎಲ್ಲ ಧರ್ಮಗಳು ಶಾಂತಿ ಮತ್ತು ಪ್ರೀತಿಯನ್ನೇ ಹೇಳಿಕೊಟ್ಟಿವೆ,

ಆದರೆ ನಾವು ಪರಸ್ಪರ ತಪ್ಪು ತಿಳುವಳಿಕೆಂದಾಗಿ ಈ ರೀತಿಯ ಗೊಂದಲದಲ್ಲಿ ಮುಳುಗಿದ್ದೇವೆ, ಇಂಥಹ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಅಂತಹ ಅಪನಂಬಿಕೆಯನ್ನು ದೂರೀಕರಿಸುವ ಪ್ರಯತ್ನ ನಾವೆಲ್ಲರೂ ಮಾಡಬೇಕಾಗಿದೆ ಎಂದರು. ಜಮಾತೆ ಇಸ್ಲಾಮಿ ಹಿಂದ್ ನಗರ ಅಧ್ಯಕ್ಷ ಮುಜಾಹೀದ ನಮಾಜಕಟ್ಟಿ ಮಾತನಾಡಿ ಪ್ರವಾದಿ ಮೊಹಮ್ಮದರು ಮನುಕುಲಕ್ಕೆ ಶಾಂತಿ, ಸತ್ಯ, ಕರುಣೆ ಮತ್ತು ಮಾನವೀಯತೆಯ ಮಾರ್ಗವನ್ನು ತೋರಿದ್ದಾರೆ. ಪ್ರವಾದಿ ಅವರ ಬದುಕು ಹಾಗೂ ವ್ಯಕ್ತಿತ್ವ ಸತ್ಯ ನ್ಯಾಯಗಳ ಪ್ರತಿರೂಪವಾಗಿತ್ತು. ಸತ್ಯದ ಪ್ರತಿಪಾದನೆ ಮತ್ತು ನ್ಯಾಯದ ಸ್ಥಾಪನೆಗಾಗಿ ಹೋರಾಟವೇ ಅವರ ಬದುಕಿನ ಸಾರವಾಗಿ–ತ್ತು. ಅವರು ನೀಡಿದ ಸಂದೇಶದಲ್ಲಿ ಮಾನವ ಸಮಾಜ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ಪರಿಹಾರ ಅಡಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸೀರತ್ ಅಭಿಯಾನದ ಉಪ ಸಂಚಾಲಕ ಹುಸೇನಪಟೇಲ ಪಟೇಲ, ಸಂಚಾರ ನಿರೀಕ್ಷಕ ಎಸ್ ಪಿ ಆಲ್ಯಾಳ, ಸಿಬ್ಬಂದಿ ಮೇಲ್ವಿಚಾರಕ ಬಿ.ಬಿ.ಚೋಕಾವಿ, ಪಾರು ಪತ್ತೆಗಾರ ಎಸ್.ಬಿ.ಬಿದರಕುಂದಿ, ನಿರ್ವಾಹಕ ಜಿ.ಜಿ.ಬಿರಾದಾರ, ಚಾಲಕರಾದ ಕುಮಾರ ಅಸ್ಕಿ, ಹೆಚ್.ಎ.ಹಾದಿಮನಿ,ಕೆ. ಎಚ್. ಓಲೇಕಾರ, ಎಸ್.ಬಿ.ಅಸ್ಕಿ ಘಟಕದ ಸಿಬ್ಬಂದಿಗಳು ಹಾಗೂ ಜಮಾತೆ ಇಸ್ಲಾಮಿ ಹಿಂದ್ ಪದಾಧಿಕಾರಿಗಳು ಇದ್ದರು.

# ಕೃಷಿ ಪರಿಕರಗಳ ಕಾಳಸಂತೆ ಮಾರಾಟ ಆರೋಪ ಲೋಕಾಯುಕ್ತರಿಂದ ಇಲಾಖೆ ಕಚೇರಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್



ಲೋಕಾಯುಕ್ತ ಅಧಿಕಾರಿಗಳು ಲಿಂಗಸಗೂರು ಕೃಷಿ ಇಲಾಖೆಯ ಕಚೇರಿಗೆ ಭೇಟಿ ನೀಡಿ

ಲಿಂಗಸಗೂರು: ಕೃಷಿ ಇಲಾಖೆಯಿಂದ ರೈತ–ರಿಗೆ ವಿತರಿಸಬೇಕಾದ ಕೃಷಿ ಪರಿಕರಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರುಸೇನೆಯ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ ಅವರು ಲೋಕಾಯುಕ್ತರಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ದಾಖಲೆ ಹಾಗೂ ಕಡತಗಳನ್ನು ಪರಿಶೀಲಿಸಿದರು.

ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ ರೈತರಿಗೆ ವಿತರಿಸಲಾಗುವ ಕೃಷಿ ಪರಿಕರಗಳನ್ನು ನಿಯಮಾನುಸಾರ ಫಲಾನುಭವಿಗಳಿಗೆ ನೀಡದೆ,

ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿ ಶಿವಪುತ್ರಗೌಡ ನಂದಿಹಾಳ ಅವರು ಲೋಕಾಯುಕ್ತರಿಗೆ ದೂರು ನೀಡಿದ್ದರು. ಅಧಿಕಾರಿಗಳು ಸಂಬಂಧಿಸಿದ ಕಡತಗಳು, ವಿತರಣೆ ದಾಖಲೆಗಳು ಹಾಗೂ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರು. ಲೋಕಾಯುಕ್ತರ ತನಿಖೆಯಿಂದ ಕೃಷಿ ಪರಿಕರಗಳ ವಿತರಣೆಯಲ್ಲಿ ಅಕ್ರಮ ನಡೆದಿರುವುದು ದೃಢಪಟ್ಟರೆ, ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ ಒತ್ತಾಯಿಸಿದ್ದಾರೆ.

# ಒಳ ಮೀಸಲಾತಿ ಜಾರಿಯಿಂದ ಬಂಜಾರ ಸಮಾಜಕ್ಕೆ ಅನ್ಯಾಯ: ಮೌನೇಶ

ನೈಜ್ಯ ದೆಸೆ ನ್ಯೂಸ್




ಮಸ್ಕಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಿದ್ದರಿಂದ ಬಂಜಾರ ಸಮಾಜಕ್ಕೆ ಅನ್ಯಾಯವಾಗಿದೆ ಎಂದು ಮೌನೇಶ ರಾಥೋಡ್ ಆರೋಪಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಒಳ ಮೀಸಲಾತಿ ಜಾರಿ ಮಾಡಿದ್ದರಿಂದ ಇತ್ತೀಚೆಗೆ ನಡೆದ ವೈದ್ಯಕೀಯ ಸೀಟು ಹಂಚಿಕೆಯಲ್ಲಿ 4500 ರ?ಯಾಂಕ್ ಬಂದರೂ ಸರ್ಕಾರಿ ಕೋಟಾದಡಿಯಲ್ಲಿ ಸೀಟುಗಳು ಸಿಗದಿರುವ ಕಾರಣ ಲಂಬಾಣಿ ಸಮಾಜದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಿನ್ನಡೆಯಾಗಿದೆ. ಚುನಾವಣೆಯಲ್ಲಿ ಬಂಜಾರ ಸಮಾಜದ ಮತಗಳಿಂದ ಗೆದ್ದ ಸ್ಥಳೀಯ ಶಾಸಕರು ಲಂಬಾಣಿ ಸಮಾಜಕ್ಕೆ ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿದ್ದರೂ ಬಂಜಾರ ಸಮಾಜದ ಪರವಾಗಿ ಧ್ವನಿ ಎತ್ತಿಲ್ಲವೆಂದು ದೂರಿದರು.

ನಂತರ ನಾಗರಾಜ ಪವಾರ್ ಮಾತನಾಡಿ ಒಳ ಮೀಸಲಾತಿಯಲ್ಲಿ ಬಂಜಾರ ಸಮಾಜಕ್ಕಾದ ಅನ್ಯಾಯವನ್ನು ಸರಿಪಡಿಸದಿದ್ದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠ ಕಲಿಸುತ್ತೇವೆ. ಒಳ ಮೀಸಲಾತಿ ಜಾ–ರಿಯಿಂದ ಸಮಾಜಕ್ಕಾದ ಅನ್ಯಾಯದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಲಾಗುತ್ತದೆ. ಆದ್ದರಿಂದ ಬಂಜಾರ ಸಮಾಜದ ಮುಖಂಡರು ಜಾಗೃತಿ–ಕೊಂಡು ಮುಂದಿನ ದಿನಗಳಲ್ಲಿ ಸಮಾಜ–ಕ್ಕಾದ ಅನ್ಯಾಯವನ್ನು ಸರಿಪಡಿಸಲು ಮುಂದಾಗಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕಲ್ಯಾಣಕುಮಾರ ಜಾದವ್, ಗುಂಡಪ್ಪ ಚೌವ್ಹಾಣ, ಸುರೇಶ ಚೌವ್ಹಾಣ ಇದ್ದರು.

## ಪ್ರಧಾನಮಂತ್ರಿ ನರೇಂದ್ರ ಮೋದಿ ಸಂವಾದಕ್ಕೆ ಜಾಲಹಳ್ಳಿ ಕಾಲೇಜು ಆಯ್ಕೆ

ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ದಿವಂಗತ ತಿಮ್ಮಪ್ಪ ದಿವಾನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಸ್ವಯಂಸೇವಕರೊಂದಿಗೆ ನಡೆಸಲಿರುವ ಉದ್ದೇಶಿತ ಸಂವಾದ ಕಾರ್ಯಕ್ರಮಕ್ಕಾಗಿ ಆಯ್ಕೆಯಾಗಿದೆ.

ಭಾರತ ಸರ್ಕಾರದ ಸಚಿವಾಲಯದ ಸೂಚನೆಯಂತೆ ಆಗಸ್ಟ್ 27ರಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ವಿಶೇಷ ಸಂವಾದ ಕಾರ್ಯಕ್ರಮ ನಡೆಯಲಿದೆ. "ಸೇವೆ, ಶಿಸ್ತು ಮತ್ತು ರಾಷ್ಟ್ರ ನಿರ್ಮಾಣ" ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಬಿ.ಎ., ಬಿ.ಎಸ್ಸಿ. ಹಾಗೂ ಬಿ.ಕಾಂ. ಪ್ರಥಮ, ಮೂರನೇ ಮತ್ತು ಐದನೇ ಸೆಮಿಸ್ಟರ್ ವಿದ್ಯಾರ್ಥಿಗಳು ಹಾಗೂ ಎನ್–ಎಸ್ಎಸ್ ಸ್ವಯಂಸೇವಕರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲಿದ್ದಾರೆ.

ಸಂಬಂಧಪಟ್ಟ ಎಲ್ಲರೂ ಸಮಯಕ್ಕೆ ಸರಿಯಾಗಿ ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕಾಲೇಜಿನ ಪ್ರಾಂಶುಪಾಲರು ಮನವಿ ಮಾಡಿದ್ದಾರೆ.

## ಮುಧೋಳದಲ್ಲಿ ರುಲೋನ್ಸ್ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿಕರ್ ಭೇಟಿ

ನೈಜ್ಯ ದೆಸೆ ನ್ಯೂಸ್



ಮುಧೋಳ: ರುಲೋನ್ಸ್ ಸಂಸ್ಥೆಯ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿಕರ್ ಅವರು ಮುಧೋಳ ಶಾಖೆಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ರುಲೋನ್ಸ್ ಮುಧೋಳ ಶಾಖೆಯ ಮುಖ್ಯಸ್ಥ ಮೊಹ್ಮದ್ ಹಂಚಿನಾಳ ಹಾಗೂ ರೆಹಮಾನ್ ಮನಿಯಾರ ರಾಜ್ಯ ಮುಖ್ಯಸ್ಥ ಮನೋಜ್ ಪರ್ವತಿಕರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಿದರು.

ಶಾಖೆಯ ವಿವಿಧ ಚಟುವಟಿ–ಕೆಗಳು ಹಾಗೂ ಗ್ರಾಹಕರಿಗೆ ನೀಡಲಾಗುತ್ತಿರುವ ಸಾಲ ಸೌಲಭ್ಯಗಳ ಕುರಿತು ಪರಸ್ಪರ ಚರ್ಚೆ ನಡೆಸಲಾಯಿತು. ರುಲೋನ್ಸ್ ಸಂಸ್ಥೆಯು ಗೃಹ ಸಾಲ, ವೈಯಕ್ತಿಕ ಸಾಲ, ವ್ಯವಹಾರ ಸಾಲ, ಆಸ್ತಿ ಮೇಲಿನ ಸಾಲ ವಾಹನ ಸಾಲ ಸೇರಿದಂತೆ ವಿವಿಧ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಗ್ರಾಹಕ–ರಿಗೆ ಸೂಕ್ತ ಹಣಕಾಸು ಸೇವೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಗ್ರಾಹಕರು ಸಾಲ ಸೌಲಭ್ಯ ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದರು ಹೆಚ್ಚಿನ ಮಾಹಿತಿಗಾಗಿ ಈ ನಂಬರಿಗೆ ಸಂಪರ್ಕಿಸಬಹುದು ಸಂಸ್ಥೆಯ ಮುಖ್ಯಸ್ಥ 77603441338618981781 ಈ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

# DJ ಸಂಭ್ರಮದ ಬದಲಾಗಿ ರೋಗಿಗಳ ಮೊಗದಲ್ಲಿ ನಗು ಮೂಡಿಸಿದ ಯುವಕರು

## ಈದ್ ಮಿಲಾದ್ ಅಂಗವಾಗಿ ಹಿರೇ ವಂಕಲಕುಂಟಾ ನೌಜವಾನ್ ಕಮಿಟಿಯಿಂದ ಮಾನವೀಯ ಸೇವೆ

ನೈಜ್ಯ ದೆಸೆ ನ್ಯೂಸ್



ಯಲಬುರ್ಗಾ: ಇಂದಿನ ದಿನಗಳಲ್ಲಿ ಈದ್ ಮಿಲಾದ್ ಸೇರಿದಂತೆ ಹಬ್ಬಗಳನ್ನು ಕೆಲವರು ಡಿಜೆ, ಸಂಭ್ರಮ ಹಾಗೂ ಮೆರವಣಿಗೆಗಳ ಮೂಲಕ ಆಚರಿಸುವುದು ಸಾಮಾನ್ಯವಾಗಿದೆ.

ಆದರೆ, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಹಿರೇ ವಂಕಲಕುಂಟಾ ಗ್ರಾಮದ ಮುಸ್ಲಿಂ ಯುವಕರು ಇದಕ್ಕೆ ವಿಭಿನ್ನವಾಗಿ, ಮಾನವೀಯತೆ ಮತ್ತು ಸಾಮಾಜಿಕ ಸೇವೆಯ ಮೂಲಕ ಈದ್ ಮಿಲಾದ್ ಆಚರಿಸಿ ಎಲ್ಲರ ಗಮನ ಸೆಳೆದಿದ್ದಾರೆ.ಗ್ರಾಮದ ಮುಸ್ಲಿಂ ನೌಜಾವಾನ್ ಕಮೀಟಿ ವತಿಯಿಂದ 20ರಿಂದ 30ಕ್ಕೂ ಹೆಚ್ಚು ಯುವಕರು ಸ್ವಯಂಪ್ರೇರಣೆಯಿಂದ ಹಣವನ್ನು ಸಂಗ್ರಹಿಸಿ, ಈದ್ ಮಿಲಾದ್ ಪ್ರಯುಕ್ತ ರೋಗಿಗಳಿಗೆ ಹಣ್ಣು–ಹಂಪಲು ಹಾಗೂ ಅಗತ್ಯ ವಸ್ತುಗಳನ್ನು ಒಳಗೊಂಡ ಕಿಟ್‌ಗಳನ್ನು ಸಿದ್ಧಪಡಿಸಿದರು. ಸೇಬು, ಕಿತ್ತಳೆ, ದಾಳಿಂಬೆ, ಬ್ರೆಡ್, ಬಿಸ್ಕತ್ ಹಾಗೂ ಹಾಲು ಒಳಗೊಂಡ ಕಿಟ್‌ಗಳನ್ನು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರ, ಎಸ್.ಎಸ್. ಆಸ್ಪತ್ರೆ, ಗಾಣದಾಳ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳಿಗೆ ವಿತರಿಸಿದರೂ ಮುಸ್ಲಿಂ ಸಮಾಜದ ಹಿರಿಯರ ಸಹಯೋಗದಲ್ಲಿ ನಡೆದ ಈ ಸೇವಾ ಕಾರ್ಯದಲ್ಲಿ ಯುವಕರು ಮಾತ್ರವಲ್ಲದೆ, ಸಮಾಜದ ಹಿರಿಯರು ಹಾಗೂ ಮುದ್ದು ಮಕ್ಕಳು ಕೂಡ ಉತ್ಸಾಹದಿಂದ ಭಾಗವಹಿಸಿದರು.

ಈ ಮೂಲಕ ಈದ್ ಮಿಲಾದ್ ಆಚರಣೆಗೆ ಹೊಸ ಅರ್ಥ ನೀಡಿದ ಯುವಕರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಜಾಮಿಯಾ ಮಸೀದಿ ಹಿರೇ ವಂಕಲಕುಂಟಾ ಅಧ್ಯಕ್ಷರಾದ ಲಾಲ್ ಸಾಬ್, "ಮಹಮ್ಮದ್ ಪೈಗಂಬರ್ ಅವರ ಜನ್ಮ ದಿನವಾದ ಈದ್ ಮಿಲಾದ್ ಪ್ರಯುಕ್ತ ನಮ್ಮ ಊರಿನ ಮುಸ್ಲಿಂ ಯುವಕರು ಒಗ್ಗಟ್ಟಾಗಿ ಹಣ ಸಂಗ್ರಹಿಸಿ, ನಮ್ಮ ಹಿರಿಯರ ಕೈಯಾರೆ ರೋಗಿಗಳಿಗೆ ಹಣ್ಣು–ಹಂಪಲು, ಹಾಲು ಹಾಗೂ ಆಹಾರ ಸಾಮಗ್ರಿಗಳನ್ನು ನೀಡಿರುವುದು ನಮಗೆ ತುಂಬಾ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ. ಪೈಗಂಬರ್ ಅವರ ಜೀವನದ ಪ್ರಮುಖ ಸಂದೇಶಗಳಲ್ಲಿ ಮಾನವೀಯತೆ, ದಯೆ, ಸಹಾಯ ಮತ್ತು ಸಹೋದರತ್ವವೂ ಪ್ರಮುಖವಾಗಿವೆ. ಅದನ್ನು ನಮ್ಮ ಯುವಕರು ತಮ್ಮ ಕಾರ್ಯದ ಮೂಲಕ ತೋರಿಸಿದ್ದಾರೆ.

ಇದೇ ರೀತಿಯಲ್ಲಿ ನಮ್ಮ ಯುವಕರು ಮುಂದೆಯೂ ಸಾಮಾಜಿಕ ಸೇವಾ ಕಾರ್ಯಗಳನ್ನು ಮುಂದುವರಿಸಬೇಕು" ಎಂದು ಹೇಳಿದರು. ಮೌಲಾನಾ ಸಾದ್ ಅವರು ಮಾತನಾಡಿ, ಮಹಮ್ಮದ್ ಪೈಗಂಬರ್ ಅವರ ಜನ್ಮ ದಿನದ ಮಹತ್ವ ಹಾಗೂ ಅವರ ಜೀವನ, ಸರಳತೆ, ದಯೆ, ಸಹಾನುಭೂತಿ, ಬಡವರ ಹಾಗೂ ಸಂಕಷ್ಟದಲ್ಲಿರುವವರ ಮೇಲಿನ ಕಾಳಜಿ ಕುರಿತು ವಿವರಿಸಿದರು. "ಪೈಗಂಬರ್ ಅವರ ಆದರ್ಶಗಳನ್ನು ಕೇವಲ ಮಾತಿನಲ್ಲಿ ಸ್ಮ–ರಿಸುವುದಕ್ಕಿಂತ, ಅವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜ–ಕ್ಕೆ ಒಳಿತನ್ನು ಮಾಡುವುದೇ ನಿಜವಾದ ಗೌರವ.

ರೋಗಿಗಳ ನೋವಿನಲ್ಲಿ ಭಾಗಿಯಾಗಿ ಅವರಿಗೆ ನೆರವಾಗಿರುವ ಯುವಕರ ಕಾರ್ಯ ಶ್ಲಾಘನೀಯ" ಎಂದು ಯುವಕರಿಗೆ ಸ್ಫೂರ್ತಿ ತುಂಬಿದರು.ಈ ಸಂದರ್ಭದಲ್ಲಿ ಶ್ಯಾಮಿದ್ ಸಾಬ್ ಗುಬ್ಬಿ,ನಜೀರ್ ಮಿಯಾ ಕುಷ್ಟಗಿ,ಮೌಲಾ ಸಾಬ್ ಮುಲ್ಲಾರ್, ಹುಸೇನ್ ಸಾಬ್ ಬಳಿಗೇರ,ಲಾಲ್ ಸಾಬ್ ಟಪ್ಪದ, ಮುನೀರ್ ಸಾಬ್ ಕುಷ್ಟಗಿ, ಸದ್ದಾಂ ಹುಸೇನ್ ಅತ್ತಾರ, ಖಾಸಿಂ ಅಲಿ ಗುಬ್ಬಿ, ಅಶ್ರಫ್ ಅಲಿ ಕುಷ್ಟಗಿ, ಹೊನ್ನೂರು ಸಾಬ್ ಮುಲ್ಲಾರ್, ಮೂರ್ತಜಾ ಸಾಬ್ ಅತ್ತಾರ್,ರಾಜಾ ಸಾಬ್ ಕಟ್ಟಿಮನಿ,ಬಾಷಾ ಅತ್ತಾರ್, ಅಜ್ಮೀರ್ ಮುಲ್ಲಾರ್,ರಾಜಾ ಸಾಬ್ ಮುಲ್ಲಾರ್,ಮೆಹಬೂಬ್ ಕಟ್ಟಿಮನಿ, ಹುಸೇನ್ ಬಾಷಾ ಬಳಿಗೇರ, ಅಲ್ಲಬಕ್ಷ ಅತ್ತಾರ್,ಅಸ್ಲಾಂ ಅತ್ತಾರ್, ಶಾಕಿರ್ ಕಟ್ಟಿಮನಿ, ಶರೀಫ್ ಸಾಬ್ ಕಟ್ಟಿಮನಿ, ಶಾಮಿದ್ ಸಾಬ್ ಅತ್ತಾರ್,ಮೌಲಾಸಾಬ್ ಕಟ್ಟಿಮನಿ,ರಾಜಾ ಸಾಬ್ ಮುಲ್ಲಾರ್, ಶರೀಫ್ ಸಾಬ್ ಕಟ್ಟಿಮನಿ, ಬಾರೆ ಸಾಬ್, ಹುಸೇನ್ ಬಾಷಾ ಗುಬ್ಬಿ,ಮಹಮ್ಮದ್ ಉಪ್ಪಿನ ಬೆಟಗೇರಿ ಸೇರಿದಂತೆ ಮುಸ್ಲಿಂ ಸಮಾಜದ ಹಿರಿಯರು, ನೌಜಾವಾನ್ ಕಮೀಟಿಯ ಯುವಕರು ಹಾಗೂ ಮುದ್ದು ಮಕ್ಕಳು ಉಪಸ್ಥಿತರಿದ್ದರು. ಹಬ್ಬದ ಸಂಭ್ರಮವನ್ನು ಕೇವಲ ಮನರಂಜನೆಗೆ ಸೀಮಿತಗೊಳಿಸದೆ, ಸಂಕಷ್ಟದಲ್ಲಿರುವವರೊಂದಿಗೆ ಸಂತೋಷ ಹಂಚಿಕೊಂಡು, ಸಮಾಜಕ್ಕೆ ಮಾದ–ರಿಯಾಗುವ ರೀತಿಯಲ್ಲಿ ಈದ್ ಮಿಲಾದ್ ಆಚ–ರಿಸಿದ ಹಿರೇ ವಂಕಲಕುಂಟಾ ಗ್ರಾಮದ ಯುವಕರ







OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101